# HAVYAKA SANDESHA

# ಹವ್ಯಕ ಸಂದೇಶ

॥धर्मो रक्षति रक्षितः॥

A Monthly Newsletter of Havyaka Welfare Trust, Estd. 1964

Vol. XXIV No. 1 APRIL 2016 Pages 16 **Rs. 2/-**


## ನಗುವು ಸಹಜದ ಧರ್ಮ
## ನಗಿಸುವುದು ಪರಧರ್ಮ
## -ಮಂಕುತಿಮ್ಮ



## ತಮಗೆಲ್ಲರಿಗೂ ಯುಗಾದಿಯ ಶುಭಾಶಯಗಳು



**Forthcoming Event**

# Shri Karki Venkataramana Shastri Suri Award Function

On 26th June at Havyakara Sabhagraha, Ghatkopar.


*PAGE DONATED BY : **M/S. METALLURGICAL SERVICES,** COURTESY : **SHRI RAMESH G. HEGDE,** MADAPPAN, KARKI, DADAR T. T.*

**"Havyaka Sandesha"** is a monthly publication by **HAVYAKA WELFARE TRUST, Mumbai** B-207, Valmiki Apartment, Sundar Nagar, Kalina, Vidyanagari P. O. Mumbai - 400 098 ✆2665 2591

***Hon. Editor*** : Smt. Amita S. Bhagwat

***Editorial Committee*** : R. M. Shastri, Smt. Shashikala Hegde, Smt. Tanuja Hegde, Smt. Uma Swamy

***Publisher*** : Narayan Akadas R., Hon. Gen. Secretary

***Printed at*** : M/s. Navin Printers, Mumbai - 400 016. ✆ 2430 8316

**Havyaka Welfare Trust (Estd. 1964) :** is a charitable organisation dedicated to protect, preserve, promote, propagate & perpetuate art, science, Havyaka culture & traditional values among the members. The Trust runs medical centre at Dombivli at concessional rate and is open to all. DONATIONS TO 'HAVYAKA WELFARE TRUST' QUALIFY FOR TAX DEDUCTION UNDER SECTION 80 (G).

**Membership of Havyaka Welfare Trust :** Patron (PT) Rs. 5010/-, benefactor (BN) Rs.3010/-, Sustaining Life Member (SL) Rs. 2010/-, Life Member (LM) 510/-, Patron Foreign Member US $ 150/-. Prescribed membership forms duly filled and sent with cash / local cheques for Greater Mumbai and DD for outsiders will be accepted.Cheque & DD shall be drawn in favour of "Havyaka Welfare Trust".

***Publication :*** Authors are requested to send the materials in English / Kannada written or typed on one side of the page directly to Havyaka office addressed to the Editor "Havyaka Sandesha" or by e-mail. Topics published need not necessarily reflect the views of Havyaka Welfare Trust. Authors are solely responsible for Articles published under their name in the Havyaka Sandesha. Right to edit the material and publish rests with the Editorial Committee.

***Change of Address :*** Members are requested to intimate the office in writing or through e-mail with their Membership No.

**Managing Committee for the year 2015-2016**

***President*** : Shivkumar P.Bhagwat
***Vice - President*** : Sanjay Bhat
***Hon. Gen. Secretary*** : Narayan Akadas
***Hon. Jt. Secretary*** : R. M. Shastri,Dombivli
***Hon. Treasurer*** : A. G. Bhat

***Elected Members :***

Smt. Tanuja Hegde, Suresh Hegde
Smt. Shashikala Hegde, R. N. Kameshwar
Gautam Upadhya, Smt.Uma Swamy
Keshav Hegde, Chidanand Bhagwat
Umesh Hegde

**Co-opted Member :** Shri A.K. Bhat

***Editorial***

# Just Smile

Before or soon after the Amavasya Night, the moon may be a slender crescent in the sky and yet it appears as if he is smiling. He may not be illuminating the sky at that point of time but the fact that he is present in the sky perhaps makes him smile.

Smile is the sign of being alive, healthy and hearty. Happiness is defined in various terms. But it is very simple. It lies in between our lips and also does not cost us anything. If smile is the indication of happiness what makes us happy? It is said that a happy person is not necessarily a rich man but the one who has the right attitude towards life. Then the question arises what is the right attitude? Is it just our willingness to take the life as it comes? Or is it our readiness to be contended with what we have? Such connotations may lead us to assume that a happy person is one who does not have much ambition. However this is not true.

Marching ahead without a plan may lead to confusion. We should also fix the direction to choose the road we have to travel though we may have to change plans according to the changed circumstances. However, if we think that we will be happy only after reaching our destination we are making our lives stressful. We have to enjoy the journey of life for which we have to recharge ourselves often. Tensions don't help in any way to solve the problem and the best way is to relax to have clarity of mind. Yes, we have to smile from time to time.

It is observed that animals don't smile; only human beings do. Smile is the blessing given to us by God. Our quality as human beings manifests itself in our smile. Not only we smile when we are happy but also our smile makes us happy. Laughter is infectious too. Once it breaks down it spreads like wild fire. But it purifies air and sets fresh air in. It has also soothing effect and slowly but surely it can heal any wound. That is why we see many laughter clubs are cropping up these days.

When joint families were the norms of our society humor was a part of life. We were smiling at each other. These days we are smiling more often reading jokes sent on Whatsapp in our mobile and are very eager to forward it. Anyway, we are smiling for some reason.

The season of spring is all set to smile. The month of April smiles with April Fool Day followed by our auspicious festival Ugadi. I hope articles by Vasudhendra and Prajna Mattihalli in this issue will also make you smile.

ಅಮಿತಾ ಎಸ್ ಭಾಗವತ್

e-mail : amitabhagwat@gmail.com

*PAGE DONATED BY :* ***ADVOCATE M. S. PANDIT*** *PUNE*

# ಸಂತ ಮಹಿಮೆ

✍ (ಸಂ) ಶ್ರೀ ಗಣೇಶ್ ಭಟ್ಟ, ಬುರ್ಡೆ, ಕರ್ಕಿ

ಶಾಂತಾ ಮಹಾಂತೋ ನಿವಸಂತಿ ಸಂತೋ
ವಸಂತವಲ್ಲೋಕಹಿತಂ ಚರಂತಃ।
ತೀರ್ಣಾಃ ಸ್ವಯಂ ಭೀಮಭವಾರ್ಣವಂ ಜನಾನ್
ಅಹೇತುನಾಽ ನ್ಯಾನಪಿ ತಾರಯಂತಃ॥

– ಆದ್ಯ ಶಂಕರಾಚಾರ್ಯ

ಭಯಂಕರವಾದ ಸಂಸಾರ ಸಾಗರವನ್ನು ತಾವು ದಾಟಿ ಯಾವ ಪ್ರತಿಫಲಾಪೇಕ್ಷೆಯೂ ಇಲ್ಲದೇ ಇತರ ಜನರನ್ನು, ತನಗೆ ಶರಣು ಬಂದವರನ್ನು ಸಂಸಾರದಿಂದ ದಾಟಿಸುವ ಶಾಂತರೂ, ಮಹನೀಯರೂ ಆದ ಸಂತರು ವಸಂತ ಋತುವಿನಂತೆ ಲೋಕಕಲ್ಯಾಣವನ್ನು ಮಾಡುತ್ತಾ ಇರುತ್ತಾರೆ. ಸಂತರು ಅಂದರೆ ಸಂಸಾರ ಸಾಗರದಲ್ಲಿ ಬೆಂದು ಬಳಲಿದ ಮನುಷ್ಯರ ಆಶ್ರಯದಾತ. ಕರ್ನಾಟಕ ಹಾಗೂ ಮಹಾರಾಷ್ಟ್ರ ಇತರೆಡೆಯಲ್ಲಿ ಸಂತರು ತಮ್ಮ ತಪಸ್ಸಿನಿಂದ ಪರಮಾತ್ಮನ ಇರವನ್ನು ಜನರಿಗೆ ತೋರಿಸಿ ಮರೆಯಾಗಿದ್ದಾರೆ. ಸಂತ ಶ್ರೇಷ್ಠರಾದಂತಹ ಶ್ರೀ ಶಂಕರಾಚಾರ್ಯರು, ಶ್ರೀ ಸಮರ್ಥ ರಾಮದಾಸರು, ಶ್ರೀ ಶ್ರೀಧರ ಸ್ವಾಮಿಗಳು, ರಾಮಕೃಷ್ಣ ಪರಮಹಂಸರು, ಸ್ವಾಮಿ ವಿವೇಕಾನಂದರು, ಜ್ಞಾನೇಶ್ವರ ಮಹಾರಾಜರು, ಅಕ್ಕಲಕೋಟ ಸ್ವಾಮಿ ಸಮರ್ಥರು, ಶ್ರೀ ಗೊಂದಾವಲೇಕರ ಮಹಾರಾಜರು, ಶೀಗೆಹಳ್ಳಿ ಶಿವಾನಂದ ಸ್ವಾಮಿಗಳು, ಇನ್ನೂ ಎಷ್ಟೋ ಸಂತರು, ಪವಾಡವನ್ನು ತೋರಿಸಿ, ಜ್ಞಾನಕೊಟ್ಟು ಧರ್ಮನಿಷ್ಠೆಯನ್ನು ಬೆಳೆಯಿಸಿದ್ದಾರೆ. ಸಂತರ ಹೃದಯವನ್ನು ಒಂದು ಬೆಣ್ಣೆ ಮುದ್ದೆಗೆ ಹೋಲಿಸಿದರೆ ತುಂಬಾ ಸಮರ್ಪಕವಾಗಿ ತೋರುವುದು. ಬೆಣ್ಣೆಯು ಮೃದುವಾಗಿರುವುದು ಹಾಗೂ ಸಂತರ ಹೃದಯವೂ ಮೃದುವಾಗಿರುವುದು. ಬೆಣ್ಣೆಗೆ ಶಾಖ ತಾಗಿದಾಗ ಮಾತ್ರ ಕರಗುವುದು. ಆದರೆ ಸಂತರ ಹೃದಯ, ಬೇರೆಯವರಿಗೆ ನೋವಾದಾಗ ಇವರ ಹೃದಯ ಕರಗುವುದು. ಬೆಣ್ಣೆಗಿಂತ ಹೆಚ್ಚು ಮೃದು ಸಂತರದ್ದಾಗಿರುತ್ತದೆ.

ವಿದ್ಯಾ ದಿವಾದಾಯ ಧನಂ ಮದಾಯ
ಶಕ್ತಿಃ ಪರೇಶಾಂ ಪರಪೀಡನಾಯ।
ಖಲಸ್ಯ ಸಾಧುರ್ವಿಪರೀತಮೇತತ್
ಜ್ಞಾನಾಯ ದಾನಾಯ ಚ ರಕ್ಷಣಾಯ॥

ದುರ್ಜನರ ಹತ್ತಿರ ವಿದ್ಯೆ ಇದ್ದರೆ ಅದು ತರ್ಕ,ಕುತರ್ಕಕ್ಕೆ ಬೇರೆಯವರ ತೇಜೋಭಂಗಕ್ಕೆ ಆಸ್ಪದ ಮಾಡಿಕೊಡುವುದು. ಹಣವಿದ್ದರೆ ಹಣದ ಬಲದಿಂದ ಯಾರನ್ನಾದರೂ ವಶ ಮಾಡಿಕೊಳ್ಳುತ್ತೇನೆ ಎಂಬ ಧನ - ಮದ ಬರುವುದು. ಶಕ್ತಿ ಇದ್ದರೆ (ಬಾಹುಬಲಿ) ಬೇರೆಯವರ ಪರಪೀಡೆಯನ್ನು ಮಾಡುವುದಕ್ಕೆ ಉಪಯೋಗಿಸುವರು. ಆದರೆ ಸಂತರ ಹತ್ತಿರ ಈ ಮೂರು ಬಲ ಇದ್ದರೆ ಅದರ ಉಪಯೋಗ ಸದುಪಯೋಗ ಆಗುವುದು. ವಿದ್ಯೆಯಿದ್ದರೆ ಅದರಿಂದ ಎಷ್ಟೋ ಮಂದಿ ಜ್ಞಾನ ಸಂಪಾದನೆ ಮಾಡಿಕೊಂಡು ಹೋಗುವರು. ಉಪದೇಶ ಪ್ರವಚನ ಮಾಡಿ ಜೀವಿಗಳನ್ನು ಉದ್ಧಾರ ಮಾಡುವರು. ಹಣವಿದ್ದರೆ ಎಷ್ಟೋ ಜನರ ದಾರಿದ್ರ್ಯವನ್ನು ಹೋಗಲಾಡಿಸುವರು. ಹೊಟ್ಟೆಗೆ ಅನ್ನ ಕೊಡುವರು. ಅನ್ನದಾನ ಅವರ ಆಶ್ರಯದಲ್ಲಿ ನಿರಂತರ ನಡೆಯುತ್ತಾ ಇರುವುದು. ಬಾಹುಬಲವಿದ್ದರೆ ತನ್ನ ಶಕ್ತಿಯಿಂದ ಸಜ್ಜನರ ರಕ್ಷಣೆ ಮಾಡುವರು. ಶ್ರೀ ಶ್ರೀಧರ ಸ್ವಾಮಿಗಳು ಹೇಳುವ ಒಂದು ಶ್ಲೋಕ ಹೀಗಿದೆ.

ಗಂಗಾ ಪಾಪಂ ಶಶಿ ತಾಪಂ ದೈನಂ ಕಲ್ಪತರುಂಸ್ತಥಾ।
ಪಾಪಂ ತಾಪಂಚ ದೈನಂಚ ಹರತಿ ಸಂತ ಸಮಾಗಮಾಃ॥

ಗಂಗೆಯಿಂದ ಪಾಪವು ಹೋಗುವುದು. ಸೂರ್ಯನ ಕಿರಣದಿಂದ ಆದ ಉಷ್ಣವನ್ನು ಚಂದ್ರನ ಕಿರಣ ನಿಃಶೇಷವಾಗಿ ಹೋಗಲಾಡಿಸುವುದು. ಕಲ್ಪತರುವಿನಿಂದ ಬೇಡಿದ ಕಾಮನೆಗಳು ನೆರವೇರುವುದು. ಆದರೆ ಪಾಪ, ತಾಪ, ದೈನ್ಯ, ದುಃಖ, ದಾರಿದ್ರ್ಯ ಎಲ್ಲವೂ ಈ ಸಂತರ ಸಹವಾಸದಿಂದ ಶೀಘ್ರವಾಗಿ ತೊಲಗುವುದು.

ಸಂತರು ಪರಮಾರ್ಥಕ್ಕೆ ಆಶ್ರಯದಾತರು. ಸಂತರಿಂದಲೇ ಜನರಲ್ಲಿ ಆತ್ಮಜ್ಞಾನವು ಪ್ರಕಟವಾಯಿತು. ಸಂತ ಸಂಗದಿಂದ ಪರಮ ದುರ್ಲಭವಾದ ಜ್ಞಾನವು ಸುಲಭ ಸಾಧ್ಯವಾಗುವುದು. ಆತ್ಮವು ಪ್ರಕಟವಾಗಿಯೇ ಇದೆ. ಆದರೆ ನೋಡಲು ಯಾರಿಗೂ ಕಾಣುವುದಿಲ್ಲ. ನಾನಾ ಸಾಧನೆಗಳನ್ನು ಮಾಡಿ ಶ್ರಮಪಟ್ಟರೂ ಪರಬ್ರಹ್ಮ ವಸ್ತು ದೊರೆಯುವುದಿಲ್ಲ. ಕಣ್ಣಿಗೆ ಅಂಜನವನ್ನು ಹಚ್ಚಿಕೊಂಡು ಹುಡುಕಿದರೂ ತೋರುವುದಿಲ್ಲ. ಸತ್ಸಂಗತಿಯ ಫಲವು ಸ್ವಾನುಭವದಿಂದಲೇ ಹೊಳೆಯುವುದು. ಮಾಯಾತೀತನಾದ ಅನಂತನನ್ನು ಸತ್ ಸಂಗತಿಯು ದೊರಕಿಸಿಕೊಡುವುದು. ಸಂತರೇ ಎಲ್ಲ ಸುಖಕ್ಕೆ ಎಲ್ಲ ಆನಂದಕ್ಕೆ ತವರು ಮನೆಯಾಗಿದ್ದಾರೆ. ಸತ್ಸಂಗತಿಯೇ ನಿಜವಾಗಿ ವಿಶ್ರಾಂತಿಯ ಕಾಲವು. ಸತ್ಸಂಗತಿಯಿಂದಲೇ ಬುದ್ಧಿಯ ಅಭಿವೃದ್ಧಿ ಯಾಗುವುದು. ಸಂತರು ಧರ್ಮಕ್ಕೆ ಧರ್ಮಕ್ಷೇತ್ರದಂತೆ, ಸ್ವರೂಪಕ್ಕೆ ಸತ್ಪಾತ್ರರಂತೆ ಇರುವವರು. ವಿವೇಕದ ಮೂರ್ತಿಗಳಾಗಿ ಇರುವರು. ಸಂತರು ಅಸಂಖ್ಯಾತ ದರಿದ್ರ ಜೀವಿಗಳನ್ನು ಮೋಕ್ಷ ಸಂಪತ್ತಿನ ನೃಪತಿಗಳನ್ನಾಗಿ ಮಾಡುತ್ತಾರೆ. ಅನೇಕ ಮಹಾರಾಜರು ಚಕ್ರವರ್ತಿಗಳು ಹಿಂದೆ ಆಗಿ ಹೋದರು. ಮುಂದೆಯೂ ಆಗುವರು. ಆದರೆ ಯಾರೂ ಸಾಯುಜ್ಯ ಮುಕ್ತಿ ಮಾತ್ರ ಕೊಡಲು ಅಸಮರ್ಥರು. ಸಂತರು ತ್ರೈಲೋಕ್ಯದಲ್ಲಿಲ್ಲದಂತಹ ದಾನವನ್ನು ಕೊಡುವರು. ಅವರ ಮಹಿಮೆಯನ್ನು ಎಷ್ಟೆಂದು ವರ್ಣಿಸುವುದು? ಪ್ರತಿಯೊಂದು ಪ್ರಾಣಿಯ ಅಂತರ್ಯಾಮಿಯಾದ ಪರಮಾತ್ಮನನ್ನು ಸಂತರು ತೋರಿಸುವರು. ಮುಖ್ಯವಾಗಿ ಸಂತರಿಂದಲೇ ಪರಮಾತ್ಮನು ಪ್ರಕಟವಾಗುವನು. ಇಂತಹ ಸಂತರಿಗೆ ನಾವೆಲ್ಲ ಮನಃಪೂರ್ವಕವಾಗಿ ಶರಣಾಗೋಣ. ನಮ್ಮಯತಾರ್ಥ ಸ್ವರೂಪವನ್ನು ಅರಿಯೋಣ.

। ಸಬ ಸಂತನ ಕೀ ಜೈ ।

## ಪಂಡಿತ ಭೀಮಸೇನ ಜೋಶಿಯವರಿಗೆ ಸ್ವರ ಶ್ರದ್ಧಾಂಜಲಿ



ಸಂಗೀತ ಲೋಕದ ದಿಗ್ಗಜ, ಭಾರತ ರತ್ನ, ಸ್ವರಾಧಿರಾಜ ಪಂಡಿತ್ ಭೀಮಸೇನ್ ಜೋಶಿಯವರ 5ನೇ ಪುಣ್ಯಸ್ಮರಣೆ ಅವರ ತವರು ಜಿಲ್ಲೆಯಾದ ಗದಗಿನ ಶ್ರೀ ವೀರನಾರಾಯಣ ದೇವರ ಸನ್ನಿಧಿಯಲ್ಲಿ ಜನವರಿ 24, 2016 ರಂದು ಜರಗಿತು. ಪಂ. ಜೋಶಿಯವರ ನೇರ ಶಿಷ್ಯ ಅರವಿಂದ್ ಹುಯಿಲಗೋಳಕರ್ ಅವರ ನೆಚ್ಚಿನ ಶಿಷ್ಯ ಸಂಕೇತ್ ಭಟ್ ಅಂದು 'ಪೂರಿಯಾ ಧನಶ್ರೀ' ರಾಗದ ನಾಲ್ಕು ಭಜನ್‌ಗಳನ್ನು ಪ್ರಸ್ತುತಪಡಿಸಿ ಎಲ್ಲರ ಪ್ರಶಂಸೆಗೆ ಪಾತ್ರರಾದರು. ಪ್ರೇಕ್ಷಕರ ಅಪೇಕ್ಷೆಯ ಮೇರೆಗೆ ಪ್ರಸ್ತುತಪಡಿಸಿದ 'ನಂಬಿದೆ ನಿನ್ನ ನಾದ ದೇವತೆಯೇ' ಹಾಡಿನ ನಂತರ ಇಡೀ ಸಭೆಯೇ ಎದ್ದು ನಿಂತು ಕರತಾಡನ ಮಾಡಿತು. ಪಂ. ಭೀಮಸೇನ ಜೋಶಿಯವರ 93 ವಯಸ್ಸಿನ ಮಾತೋಶ್ರೀಯವರು ಸಂಕೇತ್ ಭಟ್ ರನ್ನು ಸ್ವತಃ ಹೊಗಳಿ ಆಶೀರ್ವಾದ ಪೂರ್ವಕ ಕಾಣಿಕೆ ನೀಡಿ ಹಾರೈಸಿದರು.

ಸಂಕೇತ್ ಭಟ್ ನಮ್ಮ ಸಂಸ್ಥೆಯ ಆಜೀವ ಸದಸ್ಯ ಶ್ರೀ ಮಂಜುನಾಥ್ ಭಟ್, ಬುರ್ಡೆ, ಕರ್ಕಿ ಹಾಗೂ ಶ್ರೀಮತಿ ನರ್ಮದಾ ಭಟ್ ದಂಪತಿಯವರ ಸುಪುತ್ರ. ತಮ್ಮ ಬಿ. ಟೆಕ್‌ನ ಮೂರನೇ ಸೆಮಿಸ್ಟರ್‌ನಲ್ಲಿ ಕೂಡ 9.85 CGPA ಯೊಂದಿಗೆ ಸತತ 3ನೇ ಸಲ Topper ಆಗಿ ಶೈಕ್ಷಣಿಕ ಕ್ಷೇತ್ರದಲ್ಲಿ ಕೂಡ ತಮ್ಮ ಪ್ರತಿಭೆಯನ್ನು ಮೆರೆದಿದ್ದಾರೆ.

PAGE DONATED BY : **HEGDE HOSPITAL,** CHEMBUR, COURTESY : **DR. DINESH HEGDE**

# ಸಂಸ್ಕೃತ ಸಾಹಿತ್ಯದ ಹಿರಿಮೆ "ಕಾವ್ಯ ಶಾಸ್ತ್ರ ವಿನೋದ"

✍ ಶೈಲಜಾ ಹೆಗಡೆ, ಬೊರಿವಲಿ

ಸುಭಾಷಿತಗಳಿಂದ ಭಿನ್ನವಾದ ಇನ್ನೊಂದು ಕಾವ್ಯ ಪ್ರಕಾರ 'ಕಾವ್ಯ ಶಾಸ್ತ್ರ ವಿನೋದ'. ಸಂಸ್ಕೃತ ಸಾಹಿತ್ಯದ ಬೆಳವಣಿಗೆಯಲ್ಲಿ ಇದು ಮಹತ್ವದ ಸ್ಥಾನವನ್ನು ಗಳಿಸಿಕೊಂಡಿದೆ. ನೇರವಾದ ಅರ್ಥಕ್ಕಿಂತ ಭಿನ್ನವಾದ ಅರ್ಥವನ್ನು ಹೊರಸೂಸುವ ಈ ಕಾವ್ಯಗಳು ವಾಚಕರಿಗೆ ಮುದವನ್ನು ನೀಡುತ್ತವೆ. ಆದರೆ, ಇವುಗಳ ಅಂತರಾರ್ಥವನ್ನು ಗ್ರಹಿಸಲು ವಿಶೇಷವಾದ ಪ್ರತಿಭೆ ಬೇಕು. ಹಾಗಾಗಿಯೇ, 'ಕಾವ್ಯ ಶಾಸ್ತ್ರ ವಿನೋದೇನ ಕಾಲೋ ಗಚ್ಛತಿ ಧೀಮತಾಂ' ಎಂಬ ಪುರಾತನ ಉಕ್ತಿಯು, ಪಂಡಿತರ ಸಮಯವು ಕಾವ್ಯಶಾಸ್ತ್ರ ವಿನೋದಗಳಲ್ಲಿಯೇ ಕಳೆಯುತ್ತಿತ್ತು ಎಂಬ ತಥ್ಯವನ್ನು ಸಾರುತ್ತದೆ. ಭೋಜರಾಜನ ಆಸ್ಥಾನದಲ್ಲಿ ಪಾಂಡಿತ್ಯ ಪರೀಕ್ಷೆ ನಡೆಯುತ್ತಿತ್ತೆಂಬ ಬಗೆಗೆ ಹಲವು ಉದಾಹರಣೆಗಳು ದೊರೆಯುತ್ತವೆ.

'ಧನ್ವಂತರಿಃ ಕ್ಷಪಣಕಾಮರ ಸಿಂಹ ಶಂಕು।
ವೇತಾಲಭಟ್ಟ ಘಟಕರ್ಪರ ಕಾಲಿದಾಸಾಃ॥
ಖ್ಯಾತೋ ವರಾಹಮಿಹಿರೋ ನೃಪತೇ ಸ್ವಭಾಯಾಂ।
ರತ್ನಾನಿ ವೈ ವರರುಚಿರ್ನವ ವಿಕ್ರಮಸ್ಯ॥'

ಎಂಬೀ ಶ್ಲೋಕವು ವಿಕ್ರಮಾದಿತ್ಯನ ಆಸ್ಥಾನದಲ್ಲಿ ರಾರಾಜಿಸುತ್ತಿದ್ದ ಒಂಬತ್ತು ಕವಿರತ್ನರನ್ನು ವರ್ಣಿಸುತ್ತದೆ.

ಪ್ರಶ್ನೋತ್ತರಗಳು, ಒಗಟುಗಳು, ವ್ಯಾಕರಣ ನಿಯಮವನ್ನು ನಿರ್ದೇಶಿಸುವ ಶ್ಲೋಕಗಳು, ಅನೇಕಾರ್ಥವನ್ನು ಬಿಂಬಿಸುವ ಶ್ಲೋಕಗಳೇ ಮೊದಲಾದ ವಿವಿಧ ಪ್ರಕಾರಗಳು ಕಾವ್ಯ ಶಾಸ್ತ್ರ ವಿನೋದದಲ್ಲಿ ಕಂಡು ಬರುತ್ತವೆ. ಭಾಷಾ ಜ್ಞಾನವನ್ನೂ, ಸಾಹಿತ್ಯ ಜ್ಞಾನವನ್ನೂ ಅಭಿವೃದ್ಧಿ ಗೊಳಿಸುವುದರ ಜೊತೆ ಜೊತೆಯಲ್ಲಿಯೇ, ಲೌಕಿಕ ಮತ್ತು ವೈಜ್ಞಾನಿಕ, ಪೌರಾಣಿಕ, ಪಾರಮಾರ್ಥಿಕ ದೃಷ್ಟಿಕೋನಗಳನ್ನು ಹೆಚ್ಚಿಸುವ ಈ ಕಾವ್ಯಗಳು ಜ್ಞಾನ ಕಲ್ಪವೃಕ್ಷಗಳಾಗಿವೆ. ವಿನೋದಗಳ ಮೂಲಕ ಜ್ಞಾನವನ್ನು ಬೋಧಿಸುವುದು ಕಾವ್ಯಶಾಸ್ತ್ರ ವಿನೋದದ ವೈಶಿಷ್ಟ್ಯವಾಗಿದೆ. ಉಲ್ಲೇಖಿತ ಕೆಲವು ಶ್ಲೋಕಗಳು ಈ ಮಾತನ್ನು ಪುಷ್ಟಿಗೊಳಿಸುತ್ತವೆ.

'ಕೇಶವಂ ಪತಿತಂ ದೃಷ್ಟ್ವಾ ಪಾಂಡವಾಃ ಹರ್ಷನಿರ್ಭರಾಃ।
ರುದಂತಿ ಕೌರವಾಸ್ತತ್ರ ಹಾಹಾ ಕೇಶವ ಕೇಶವ"॥

ಬಿದ್ದಿರುವ ಕೇಶವನನ್ನು ಕಂಡು ಪಾಂಡವರು ಹರ್ಷಭರಿತರಾದರು. ಕೌರವರು ಹಾಹಾ ಕೇಶವ... ಕೇಶವ.... ಎಂದು ದುಃಖಿಸಿದರು ಎಂಬುದು ಈ ಶ್ಲೋಕದ ಸಾಮಾನ್ಯ ಅರ್ಥವಾಗಿದೆ. ಆದರೆ ಇದು ಮಹಾಭಾರತದ ಕಥೆಗೆ ವಿಭಿನ್ನ ಅರ್ಥವನ್ನು ನೀಡುತ್ತದೆ. ಅಂತೆಯೇ, ಈ ಶ್ಲೋಕದ ಅನ್ವರ್ಥವು ಇದಕ್ಕೆ ವಿರುದ್ಧವಾದ ಅರ್ಥವನ್ನು ಸ್ಫುರಿಸುತ್ತದೆ. ಸಂಸ್ಕೃತ ಸಾಹಿತ್ಯದಲ್ಲಿ 'ಕ' ಎಂಬುದಕ್ಕೆ ನೀರು ಎಂದೂ, 'ಪಾಂಡವಾಃ' ಎಂಬ ಪದಕ್ಕೆ ಬಿಳಿಯ ಬಣ್ಣದ ಬಕ ಪಕ್ಷಿಗಳು ಎಂದೂ, 'ರವ' ಎಂದರೆ ಧ್ವನಿ ಅಥವಾ ಶಬ್ದ ಎಂದೂ ಅರ್ಥ ವಿವರಣೆ ದೊರೆಯುತ್ತದೆ. ಆ ಅರ್ಥದ ಪ್ರಕಾರ, ಪ್ರಸ್ತುತ ಶ್ಲೋಕದ ಅರ್ಥವು, ನೀರಿನಲ್ಲಿ ಬಿದ್ದಿರುವ ಶವವನ್ನು ಕಂಡು ಬಕಪಕ್ಷಿಗಳು ಹರ್ಷಭರಿತವಾದವು. ಕಾಕಾ ಎಂದು ಧ್ವನಿಗೈಯುವ ಕಾಗೆಗಳು (ತಮಗೆ ದಕ್ಕಲಾರದೆಂಬ ಕಾರಣದಿಂದ) ದುಃಖಿಸಿದವು ಎಂದಾಗುತ್ತದೆ. ಇಲ್ಲಿ ಶ್ಲೋಕದ ಎರಡನೆಯ ಅರ್ಥವೇ ಸರ್ವಸಮ್ಮತವಾದುದು.

"ಅಪದೋ ದೂರಗಾಮೀ ಚ ಸಾಕ್ಷರೋ ನ ಚ ಪಂಡಿತಃ।
ಅಮುಖಃ ಸ್ಫುಟವಕ್ತಾ ಚ ಯೋ ಜಾನಾತಿ ಸ ಪಂಡಿತಃ"।

ಕಾಲಿಲ್ಲದಿದ್ದರೂ ದೂರ ಚಲಿಸುವಂತಹುದು, ಅಕ್ಷರ ಜ್ಞಾನವುಳ್ಳದ್ದಾದರೂ ಪಂಡಿತನಲ್ಲ ಮತ್ತು ಬಾಯಿಯಿಲ್ಲದಿದ್ದರೂ ಸ್ಪಷ್ಟವಾಗಿ ಮಾತಾಡಬಲ್ಲುದು. ಇದನ್ನು ಯಾವನು ಬಲ್ಲನೋ ಅವನೇ ಪಂಡಿತನು.

ಇದೊಂದು ಒಗಟಿನ ಶ್ಲೋಕವಾಗಿದೆ. ಇದರ ಉತ್ತರ 'ಪತ್ರ'. ಒಗಟನ್ನು ಸಂಸ್ಕೃತದಲ್ಲಿ 'ಪ್ರಹೇಲಿಕಾ' ಎನ್ನುತ್ತಾರೆ.

'ಸೀಮಂತಿನೀಷು ಕಾ ಶಾಂತಾ।
ರಾಜಾ ಕೋಽಭೂತ್ ಗುಣೋತ್ತಮಃ।
ವಿದ್ವದ್ಭಿಃ ಕಾ ಸದಾ ವಂದ್ಯಾ।
ತತ್ರೈವೋಕ್ತಂ ನ ಬುದ್ಧ್ಯತೇ॥'

ಈ ಶ್ಲೋಕದಲ್ಲಿ ಮೂರು ಪ್ರಶ್ನೆಗಳಿದ್ದು, ಪ್ರತಿಯೊಂದು ಪ್ರಶ್ನೆಯ ಉತ್ತರವೂ ಶ್ಲೋಕದಲ್ಲಿಯೇ ಹುದುಗಿಕೊಂಡಿರುವುದು ಆಶ್ಚರ್ಯದ ಸಂಗತಿ. ಸಾಲಿನ ಮೊದಲ ಮತ್ತು ಕೊನೆಯ ಅಕ್ಷರವನ್ನು ಸೇರಿಸಿದಾಗ ಉತ್ತರವು ದೊರೆಯುವುದು ಇದರ ವಿಶೇಷತೆಯಾಗಿದೆ. 'ಸೀಮಂತಿನೀಷು ಕಾ ಶಾಂತಾ' ಎನ್ನುವಲ್ಲಿ ಸ್ತ್ರೀಯರಲ್ಲಿ ಶಾಂತ ಸ್ವಭಾವದವಳು ಯಾವಳು? ಎಂಬ ಪ್ರಶ್ನೆಗೆ, ಮೊದಲ ಸಾಲಿನ ಮೊದಲ ಅಕ್ಷರ 'ಸೀ' ಮತ್ತು ಕೊನೆಯ ಅಕ್ಷರ 'ತಾ' ಎಂಬುದನ್ನು ಜೋಡಿಸಿದಾಗ ಸೀತಾ ಎನ್ನುವ ಪದವು ಉತ್ತರರೂಪದಲ್ಲಿ ಸಿಗುತ್ತದೆ. ಹಾಗೆಯೇ 'ರಾಜಾ ಕೋಽಭೂತ್ ಗುಣೋತ್ತಮಃ' ಎಂಬಲ್ಲಿ, 'ರಾಮಃ' ಎಂಬ ಪದವು ಉತ್ತರವಾಗಿ ಪರಿಣಮಿಸುತ್ತದೆ. 'ವಿದ್ವದ್ಭಿಃ ಕಾ ಸದಾ ವಂದ್ಯಾ' ಎಂಬ ಪ್ರಶ್ನೆಗೆ 'ವಿದ್ಯಾ' ಎಂಬುದು ಉತ್ತರವೆನಿಸುತ್ತದೆ. 'ತತ್ರೈವ ಉಕ್ತಂ ನ ಬುದ್ಧ್ಯತೇ' ಎಂಬ ನಾಲ್ಕನೆಯ ಸಾಲಿನಲ್ಲಿ ಉತ್ತರವು ಅಲ್ಲಿಯೇ ಹೇಳಲ್ಪಟ್ಟಿರುವುದು. ಆದರೆ ಅದು ಸುಲಭವಾಗಿ ಗೋಚರಿಸುವುದಿಲ್ಲವೆಂಬ ಸ್ವಾರಸ್ಯವನ್ನು ಕವಿ ಸುಂದರವಾಗಿ ಬಣ್ಣಿಸಿದ್ದಾನೆ.

'ಕಾ ಪಾಂಡುಪತ್ನೀ ಗೃಹಭೂಷಣಂ ಕಿಂ।
ಕೋ ರಾಮಶತ್ರುಃ ಕಿಮಗಸ್ತಿ ಜನ್ಮಃ ।
ಕಃ ಸೂರ್ಯಪುತ್ರೋ ವಿಪರೀತ ಪ್ರಷ್ಟಾ।
ಕುಂತೀಸುತೋ ರಾವಣಕುಂಭಕರ್ಣಃ॥'

ಕುಂತಿಯ ಮಕ್ಕಳು ರಾವಣ ಕುಂಭಕರ್ಣರು ಎಂಬ ಅರ್ಥವನ್ನು ಧ್ವನಿಸುವ ಈ ಶ್ಲೋಕ ವಾಚಕರನ್ನು ವಿಸ್ಮಯಗೊಳಿಸುತ್ತದೆ. ಆದರೆ ಮೊದಲ ಮೂರು ಸಾಲುಗಳಲ್ಲಿ ಪ್ರಶ್ನೆಗಳಿದ್ದು, ಕೊನೆಯ ಸಾಲು ಅದಕ್ಕೆ ಉತ್ತರರೂಪದಲ್ಲಿರುವುದು ಸೂಕ್ಷ್ಮವಾಗಿ ಅವಲೋಕಿಸಿದಾಗ, ವೇದ್ಯವಾಗುತ್ತದೆ.

ಕಾ ಪಾಂಡುಪತ್ನಿ- ಪಾಂಡುವಿನ ಪತ್ನಿ ಯಾರು? (ಕುಂತಿ)

ಗೃಹಭೂಷಣಂ ಕಿಂ-ಗೃಹಕ್ಕೆ ಭೂಷಣವಾದುದು ಯಾವುದು? (ಸುತ)

ಕೋ ರಾಮಶತ್ರುಃ - ರಾಮನ ಶತ್ರು ಯಾರು? (ರಾವಣ)

PAGE DONATED BY : **SHRI N. R. HEGDE,** DOMBIVLI

ಕಿಮಗಸ್ತಿ ಜನ್ಮ- ಅಗಸ್ತ್ಯರ ಜನ್ಮ ಯಾವುದರಿಂದ? (ಕುಂಭ)

ಕಃ ಸೂರ್ಯ ಪುತ್ರಃ- ಸೂರ್ಯನ ಪುತ್ರ ಯಾರು? (ಕರ್ಣ)

ಇಲ್ಲಿ 'ವಿಪರೀತ ಪ್ರಚ್ಛಾ' ಎನ್ನುವ ಪದಪುಂಜಗಳಿಂದ, ನಾಲ್ಕನೆಯ ಸಾಲು ವಿರುದ್ಧಾರ್ಥವನ್ನು ಕೊಡುತ್ತಿದೆ ಎಂಬುದನ್ನು ಯುಕ್ತಿಪೂರ್ವಕವಾಗಿ ಸೂಚಿಸಲಾಗಿದೆ.

'ಸಾ ರಸನಾ ತೇ ನಯನೇ ತಾವೇವ ಕ ರೌ'
ಸ ಏವ ಕೃತಕೃತ್ಯಃ।
ಯಾ ಯೇ ಯೌ ಯೋ ಭರ್ಗಂ ವದತೀಕ್ಷೇತೇ
ಸಮರ್ಚತಃ ಸ್ಮರತಿ" ॥

ಶ್ರೀ ಶಂಕರ ಭಗವತ್ಪಾದ ವಿರಚಿತ 'ಶಿವಾನಂದ ಲಹರಿ' ಯಿಂದ ಇದನ್ನು ಆಯ್ದುಕೊಳ್ಳಲಾಗಿದೆ.

ಈ ಶ್ಲೋಕದಲ್ಲಿ ವ್ಯಾಕರಣಕ್ಕೆ ಸಂಬಂಧಪಟ್ಟ ಪದಬಂಧಗಳು ಛಂದಸ್ಸಿಗನುಗುಣವಾಗಿ ಸುವ್ಯವಸ್ಥಿತವಾಗಿ ಹೆಣೆಯಲ್ಪಟ್ಟಿವೆ. ಪ್ರತಿಯೊಂದು ಭಾಷೆಗೂ ತನ್ನದೇ ಆದ ಶೈಲಿಯಿದೆ. ಸಂಸ್ಕೃತ ಭಾಷೆಯಲ್ಲಿ ಲಿಂಗ ಮತ್ತು ವಚನಗಳು ಬದಲಾದಂತೆ ವಿಶೇಷಣಗಳೂ ಬದಲಾಗುತ್ತದೆ. ಇಲ್ಲಿ ಭಾಷಾ ವೈವಿಧ್ಯದ ಜೊತೆಯಲ್ಲಿ ಕಾವ್ಯಾರ್ಥವೂ ಸುಂದರವಾಗಿ ನಿರೂಪಿಸಲ್ಪಟ್ಟಿದೆ. ಇದನ್ನು 'ಯಥಾ ಸಾಂಖ್ಯ' ವೆಂದೂ ಕರೆಯುತ್ತಾರೆ. 'ಯಾ ಸಾ ರಸನಾ (ಭರ್ಗಂ) ವದತಿ' ಯಾವ ನಾಲಗೆಯು ಶಿವನನ್ನು ಭಜಿಸುತ್ತದೆಯೋ, 'ಯೇ ತೇ ನಯನೇ (ಭರ್ಗಂ) ಈ ಕ್ಷೇತೇ'- ಯಾವ ಕಣ್ಣುಗಳು ಶಿವನನ್ನು ನೋಡುತ್ತವೆಯೋ 'ಯೌ ತೌ ಏವ ಕರೌ (ಭರ್ಗಂ) ಸಮರ್ಚತಃ' ಯಾವ ಕರಗಳು ಶಿವನನ್ನು ಪೂಜಿಸುತ್ತವೆಯೋ, 'ಯಃ (ಭರ್ಗಂ) ಸ್ಮರತಿ' ಯಾವನು ಶಿವನನ್ನು ಸ್ಮರಿಸುತ್ತಾನೆಯೋ, 'ಸ ಏವ ಕೃತಕೃತ್ಯಃ' ಅವನೇ ಧನ್ಯನು ಎಂಬುದು ಶ್ಲೋಕಾರ್ಥವಾಗಿದೆ. ಹೀಗೆ ಸಂಸ್ಕೃತ ಸಾಹಿತ್ಯದಲ್ಲಿ ಅಸಂಖ್ಯಾತವಾಗಿ ದೊರೆಯುವ ಕಾವ್ಯ ಶಾಸ್ತ್ರ ವಿನೋದಗಳು ಮಹತ್ತರವಾದ ಪಾತ್ರವನ್ನು ವಹಿಸುತ್ತವೆ. ಇಂದಿಗೂ ವಿದ್ವತ್ ಸಭೆಗಳಲ್ಲಿ ವಾಕ್ಯಾರ್ಥ, ಸಮಸ್ಯಾಪೂರ್ತಿ, ಶ್ಲೋಕಾರ್ಧ ಪೂರ್ತಿಯೇ ಮೊದಲಾದ ಪಾಂಡಿತ್ಯ ಪ್ರದರ್ಶನಗಳು ನಡೆಯುತ್ತಿರುವುದು ಇವುಗಳ ಬೆಳವಣಿಗೆಗೆ ಜ್ವಲಂತ ಉದಾಹರಣೆಯಾಗಿವೆ. ಅಂತೆಯೇ ವಿವಿಧ ಭಾಷಾ ಸಾಹಿತ್ಯಗಳ ಮೇಲೂ ಈ ಕಾವ್ಯ ಪ್ರಕಾರಗಳು ಗಾಢವಾದ ಪ್ರಭಾವವನ್ನು ಬೀರಿರುವುದನ್ನು ನಾವು ಕಾಣಬಹುದಾಗಿದೆ. ಹಾಗಾಗಿಯೇ 'ವಾಕ್ಯಂ ರಸಾತ್ಮಕಂ ಕಾವ್ಯಂ' ಎಂದು ವಿಶ್ವನಾಥನು ನುಡಿದಿದ್ದಾನೆ. ದೋಷಗಳನ್ನು ದೂರಮಾಡಿ ಇವು ಉನ್ನತಿಯನ್ನು ಉಂಟು ಮಾಡಲು ಕಾರಣವಾಗಬಲ್ಲವೆಂಬುದನ್ನು ಆತ ಪ್ರತಿಪಾದಿಸಿದ್ದಾನೆ.

(ವಿ.ಸೂ. : 1. ಹಿಂದಿನ ಸಂಚಿಕೆಯಲ್ಲಿ ಚಿಕ್ಕ ಮುದ್ರಣದೋಷದಿಂದ 'ಜಂತವಃ' ಎಂಬ ಶಬ್ದ ಜಾತವಃ ಎಂದಾಗಿದೆ. ಕೊನೆಯ ಶ್ಲೋಕದಲ್ಲಿ ಶರ್ಕರಾ ಚಾಶ್ಮತಾಂ ಆಗಬೇಕು. 2. ಸಂಸ್ಕೃತ ಭಾಷೆ ಎಲ್ಲ ಭಾಷೆಗಳ ಜನನಿ. ಅದಕ್ಕೆ ಮೃತ್ ಪದದ ಸ್ಪಷ್ಟೀಕರಣ; ಬಿಲ್ಲವ ಭವನದಲ್ಲಿ ಜರುಗಿದ ಕಾರ್ಯಕ್ರಮದಲ್ಲಿ ವಿದ್ಯಾವಾಚಸ್ಪತಿ ಬನ್ನಂಜೆ ಗೋವಿಂದಾಚಾರ್ಯರೊಡನೆ ನಡೆಸಿದ ಪ್ರಶ್ನೋತ್ತರದಲ್ಲಿ (ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಅಜ್ಜ ಮೊಮ್ಮಕ್ಕಳ ಸಂವಾದ) ಪಡೆದುಕೊಂಡ ಉತ್ತರವಾಗಿದೆ)

*(ಮುಂದುವರಿಯುವುದು...)*

# ತುಂಗಾ

**- ಡಾ. ಜಿ. ಡಿ. ಜೋಶಿ**

ತೆಂಕ ಸಹ್ಯಾದ್ರಿಯ ಶಿಖರದಲಿ ಒಸರುತಲೆ
ಜನಿಸಿತಂದು ಜಿನುಗುತ ಮಿನುಗುತ
ಹರಡಿ ಹಳ್ಳವಾಗಿ ಮೈತುಂಬುತ ಬೆಳೆಯುತಲೆ
ಇಳಿದು ಹಾರುತಲಿ ಸವಿ ನೀರನು ಪಡೆಯುತ ಪುಣ್ಯ
ತುಂಗೆಯೆಂಬ ಅಭಿದಾನವ ಪಡೆದ ನದಿಯಾಗುತ
ಶುದ್ಧ ಜಲವಾಗಿ ಪ್ರಾಣಿಗಳಿಗೆ, ಮರಬಳ್ಳಿಗೆ
ಜೀವನಕೆ ಆಧಾರವಾಗಿ ಮೀನು ಮೊಸಳೆ ಹಾವು ಕಪ್ಪೆಗಳಿಗೆ
ವಾಸಸ್ಥಾನವಾಗಿ ನಿಂತಲ್ಲಿ ನಿಲ್ಲದೆ ತಿರುವುಗಳ ಸೃಷ್ಟಿಸುತ
ಬಂಡೆಗಳ ಬೆನ್ನು ತಟ್ಟಿ ಅತಿ ನೆರೆ ಬಂದಾಗ ಬದಿ ಭೂಮಿ
ನೀರುಣಿಸಿ ಪಕ್ಕದಲಿ ಕಾಣುವ ದೇವಾಲಯಗಳಿಗೆ ನಮಿಸಿ
ಮೊದಲ ಹಂತದಲಿ ಕಂಡ ಪುಣ್ಯ ಶೃಂಗೇರಿ ಕ್ಷೇತ್ರ
ಅದರ ಪಾದ ಸ್ಪರ್ಶಿಸುತ ಹಣೆ ಧೂಳ-ಭಸ್ಮ ಲೇಪಿಸಿ
ಜೊತೆಗೆ ಶಿವ ಶಾರದೆಯರಿಗೆ ತಪ್ಪದೆ ನೀನು ನಮಿಸಿ
ಪುಣ್ಯಕ್ಷೇತ್ರ ಸ್ಥಾಪಕ ಶಂಕರಾಚಾರ್ಯರ ನೆನೆಯುತ
ಭದ್ರಾವತಿ ಪಟ್ಟಣ ನಿರ್ಮಿಸಿ ನೀರುಣಿಸಿ ಸಾಗಿ
ಮುಂದೆ ಅತ್ತಲಿಂದ ಹರಿದು ಬರುವ ಭದ್ರೆಯೊಡನೆ
ಕೂಡ್ಲಿಗಿಯಲಿ ಕೈಕುಲುಕಿ ಒಂದಾಗುತಲೆ ಸಂಗಮದ ದೇವರು
ಶಾರದಾಂಬೆ ಸೋಮೇಶ್ವರರಿಗೆ ಶರಣಾಗಿ ಧನ್ಯಳಾಗುತ
ತುಂಗಭದ್ರೆ ನಾಮಾಂಕಿತಳಾಗಿ ಮೆರೆಯುತ ಹರಿದುಬಂದ
ಕುಮುದ್ವತಿಗೆ ಸ್ವಾಗತ ಕೋರಿ ಒಳ ಸೇರಿಸಿಕೊಂಡು
ಗುಪ್ತಗಾಮಿನಿ ನೀರಾಗಿ ಹರಿದು ಪಾತ್ರವ ಹಿರಿದು
ಮಾಡಿಕೊಳುತ ಗಳಗನಾಥದ ಗರ್ಗೇಶ್ವರ ಪಾದವ
ಸ್ಪರ್ಶಿಸಿ ಆಶೀರ್ವಾದ ಪಡೆವಷ್ಟರಲಿ ಅತ್ತಲಿಂದ
ಹರಿದು ಬರುವ ವರದಾ ನದಿಗೆ, ಅದರಲಿ ಸಮಾವೇಶ
ಪಡೆದ ಧರ್ಮಾನದಿಗೆ ಬರ ಮಾಡಿಕೊಳುತ ಗಡ್ಡೆ
ಎಂಬ ನಡುಗಡ್ಡೆಯ ನಿರ್ಮಿಸಿ ಅಲ್ಲಿರುವ ಪಂಚ
ಲಿಂಗೇಶ್ವರಗೆ ನಮಿಸುತ ಪಾತ್ರವ ಸ್ವಲ್ಪ
ಹೊರಳಿಸಿ ಪೂರ್ವಾಭಿಮುಖವಾಗಿ ನಗುತ
ಹರಿ ಹರಿಯುತಲೆ ಬಿದಿರಹಳ್ಳಿಯ ಶಿವಾಲಯದ
ಪಾದಕೆ ನಮಿಸಿ ಮುಂದೆ ಬಂದೆ ನೀ ಹುಸಿಯ
ವಿರೂಪಾಕ್ಷನ ಪ್ರದಕ್ಷಿಣೆ ಮಾಡಿ ನಮಿಸಲೆಂದು
ಕಲ್ಲು ಬಂಡೆಗಳೊಡನೆ ಸರಸವಾಡುತ ಬಂದು ತಂಗಿದೆ
ಕೆಲಕಾಲ ವಿಶ್ರಾಂತಿ ಪಡೆಯಲೆಂದು ಅಡ್ಡವಾದ
ಅಣೆಕಟ್ಟಿನ ಗೋಡೆಗೆ ಬೆನ್ನುಕೊಟ್ಟು ಸೊರಗಿ ಚೈತನ್ಯ
ಪಾತ್ರದಲಿ ಹರಿಯುತಲೆ ಮುಂದೆ ಕುಣಿಯುತ
ಜನರ ಬಾಯಾರಿಕೆಯ ಬಳ್ಳಿ ವೃಕ್ಷಗಳ ದಾಹವ
ತಣಿಸಲೆಂದು ಆಂಧ್ರಪ್ರದೇಶದಲಿ ಸುತ್ತಾಡಿ ಸುತ್ತಾಡಿ
ಕೊನೆಗೆ ಸೇರಿ ಸಮುದ್ರ ರಾಜನ ಮನೆಯ ಕೈಹಿಡಿದು
ಅವನ ಪತ್ನಿಯಾಗಿ ಉಪ್ಪು ನೀರಿಗೆ ಬೆರಕೆಯ
ಸವಿನೀರಾಗಿ ಬೆಂಗಾಲ ಕೊಲ್ಲಿಯಲಿ ಅಮರಳಾಗಿ
ಗಂಗಾಸ್ನಾನ ತುಂಗಾಪಾನವೆನ್ನಲು ನೀನೇ ಕಾರಣ
ತುಂಗಾತೀರ ವಿಹಾರವು ಒಳ್ಳೆಯದೆಂದೇ ಹಾಡಿದರು
ಜೊತೆಗೂಡಿದ ಸಹೋದರಿಯನೂ ನೀ ಧನ್ಯ ಮಾಡಿದ ದೇವಿ ★

# ಸತ್ಯಂ ಭ್ರೂಯಾತ್ ವಾ ಪ್ರಿಯಂ ಭ್ರೂಯಾತ್

✍ ಪ್ರಜ್ಞಾ ಮತ್ತಿಹಳ್ಳಿ

ಸೀತಾಪಹರಣಕ್ಕೆ ಮುನ್ನ ರಾವಣನಿಗೆ ಸಲಹೆ ಕೊಡಬೇಕಾದಾಗ ಮಾರೀಚನನ್ನು ಕಾಡಿದ ಉಭಯ ಸಂಕಟವಿದು. ಪರಸತಿಯ ಮುಟ್ಟಿದರೆ ಸುಟ್ಟು ಹೋಗುತ್ತಿ ಎಂಬ ಸತ್ಯ ಹೇಳಿ ಇಪ್ಪತ್ತು ತೋಳುಗಳಿಂದ ತದುಕಿಸಿಕೊಳ್ಳಬೇಕೋ ಅಥವಾ ಹತ್ತೂ ಗಂಟಲು ಗಹಗಹಿಸುವಂತಹ ಪ್ರಿಯವಾಕ್ಯ ಉಲಿದು ಉಳಿದುಕೊಳ್ಳಬೇಕೋ ಅಂದರೆ ಸತ್ಯ ಯಾವಾಗಲೂ ಕಹಿಯಾಗಿರುತ್ತದೆ ಮತ್ತು ಪ್ರಿಯವಾದದ್ದು ಸತ್ಯವಾಗಿರುವುದಿಲ್ಲ. ಹೀಗೊಮ್ಮೆ ನಿಮ್ಮ ಪರಿಚಿತರು ಅತಿ ಕೆಟ್ಟದಾಗಿ ಹಾಡುತ್ತಾರೆ. ವೇದಿಕೆಯ ಮೇಲೆ ಅವರು ನಿಂತಷ್ಟು ಹೊತ್ತು ಸಭಾಗೃಹದಲ್ಲಿರುವ ಪ್ರೇಕ್ಷಕರು ಸೀಟುಗಳ ಸಂದಿಗೊಂದಿಗಳಲ್ಲಿ ಕಣ್ಣಾಡಿಸುತ್ತಿರುತ್ತಾರೆ. ಎಲ್ಲಾದರೂ ಸಣ್ಣ ಸೂಜಿನ ಬಾಂಬು ಸಿಡಿದು ತಾವೆಲ್ಲ ಓಡಿ ಹೋಗಲು ನೆಪ ಸಿಗಬಾರದೇ ಎಂದು. ವೇದಿಕೆಯಿಂದ ಇಳಿದು ಬಂದ ಆ ಗಾಯಕರೋ ಗಾನಗಂಗೆಯನ್ನು ಪರಮೇಶ್ವರನ ಜಟೆಯಿಂದ ನೇರವಾಗಿ ಇಳೆಗಿಳಿಸಿದ ಪರಮ ತೃಪ್ತಿಯಿಂದ ಪ್ರಶ್ನಿಸುತ್ತಾರೆ. 'ಹೇಗಿತ್ತು?' ಸತ್ಯ ಹೇಳಿ ವಿನಾಕಾರಣ ನಿಮ್ಮ ವೈರಿ ಪಡೆಯ ಆಜೀವ ಚಂದಾದಾರರ ಸಂಖ್ಯೆ ಹೆಚ್ಚಿಸಿಕೊಳ್ಳುತ್ತೀರಾ ಅಥವಾ ಪ್ರಿಯವಾಗುವಂತೆ ಉತ್ತರಿಸಿ ಬಣ್ಣಗೆಟ್ಟ ನಾಲಿಗೆಯನ್ನು ಹಲ್ಲುಗಳ ಸಂದಿಯಲ್ಲಿ ನರಳಿಸುತ್ತೀರಾ?

ಬಾಲ್ಯದಿಂದಲೂ ಕಂಡ ಕಂಡ ಹಿರಿಯರೆಲ್ಲ ಕಿವಿಮಾತು ಬೀಳುವಂತೆ ಸತ್ಯ ಹೇಳಬೇಕು. ಸುಳ್ಳೆಂದರೆ ಮಹಾಪಾಪ ಎಂದು ಕೊರೆ ಕೊರೆದು ಮೆದುಳ ಗೋಡೆಗಳಿಗೆ ಫೆವಿಕಾಲಿಂದ ಅಂಟಿಸಿ ಬಿಟ್ಟಿರುತ್ತಾರೆ. ಸಾಲದ್ದಕ್ಕೆ ಶಾಲೆಯ ಪುಸ್ತಕದಲ್ಲೂ ಅದೇ ಕಥೆ- ಹಾಡು. ಸತ್ಯಕ್ಕಾಗಿ ಮಾಡಲು ಇನ್ನೇನೂ ಉಳಿಸದ ಹರಿಶ್ಚಂದ್ರ, ಭಯಂಕರ ಹಸಿವೆಯನ್ನೂ ತಡೆದುಕೊಂಡು ಮುಖ ಬಾಡಿಸಿಕೊಂಡು ಕಾಯುತ್ತ ಕೂತು ಆಮೇಲೆ ತಿರುಗಿ ಬಂದು ಹಸುವಿನ ಸತ್ಯಕ್ಕೆ ಹೆದರಿ ಬೆಟ್ಟ ಹಾರಿ ಸತ್ತ ಹುಲಿ. ಪಾಪ ಹಸುಗೂಸಿನ ಮನಸ್ಸಿನ ಹುಲಿಯನ್ನು ನೆನೆದರೇ ಪಶ್ಚಾತ್ತಾಪ ಉಕ್ಕುತ್ತದೆ. ಸಾಕ್ಷಾತ್ ಭಗವಂತನೇ ಆ ಪ್ರಾಣಿಗೆ ಬಾಯ್ತುಂಬ ಚೂಪಾದ ಹಲ್ಲು, ನಾಕ್ನಾಕು ಕಾಲ್ತುಂಬ ಉಗುರು, ಕಾಡು ನಡುಗಿಸುವ ಕಂಠ ದಯಪಾಲಿಸಿ ಹೊಟ್ಟೆ ತುಂಬ ಗೋಗಳನ್ನು, ಕಡಿಮೆ ಬಿದ್ದಾಗ ಗೋಪಾಲಕನನ್ನು ತಿಂದುಕೊ ಎಂದು ಕಳಿಸಿರುವಾಗ ಸರ್ವಸಂಗ ಪರಿತ್ಯಾಗಿ ಸಂತರೂ ನಾಚುವಂತೆ ತ್ಯಾಗ, ಬಲಿದಾನಗೈದಿತಲ್ಲ ಈ ಸತ್ಯ ಎನ್ನುವುದಾದರೂ ಎಂತಹ ಭಯೋತ್ಪಾದಕನ ಹಾಗೆ ಇರಬಹುದು. ಅದಕ್ಕೆ ಅಲ್ಲವೆ ಶತಮಾನಗಟ್ಟಲೇ ಸುಖವಾಗಿ ಆಳಿಕೊಂಡಿದ್ದ ಬ್ರಿಟಿಷರೂ ಸಹ ಗಾಂಧಿತಾತನ ಸತ್ಯದ ಗಲಾಟೆಗೆ ಹೆದರಿ ಹಡಗು ಹತ್ತಿ ಓಡಿದ್ದು.

ಪ್ರಪಂಚಕ್ಕೆ ಗೊತ್ತಿರುವುದು ಚಂಡವ್ಯಾಘ್ರನ ಬಗ್ಗೆ ಇಷ್ಟೇ ಕಥೆ. ಆದರೆ ಸಾಯುವಾಗ ಚಂಡವ್ಯಾಘ್ರ ವಿವಾಹಿತನೇ? ಮರಿ-ಮಕ್ಕಳು ಇದ್ದ ಕುಟುಂಬವಂತನೆ? ಇತ್ಯಾದಿ ಸಂಶೋಧನೆ ನಡೆದಿಲ್ಲ. ಸಂತತಿ ಮುಂದುವರಿದಿದೆ ಎಂಬುದು ನನ್ನ ಗುಮಾನಿ. ಅದಕ್ಕೆ ಪುರಾವೆಯೆಂಬಂತೆ ಉತ್ತರ ಕನ್ನಡದಲ್ಲೊಂದು ಕಥೆ ಚಾಲ್ತಿಯಲ್ಲಿದೆ. 'ಕ್ವಾತೆ ಅಜ್ಜಿ ಕತೆ' ರಗಳೆ, ತಗಾದೆ, ದೂರು ಅಂತ ಅರ್ಥ. ಅನಾಥಳಾದ ಅಜ್ಜಿಯೊಬ್ಬಳ ಬಳಿ ಅಷ್ಟೇ ಅನಾಥವಾದ ಆಕಳ ಕರು ಇತ್ತು. ಬಡತನದ ಕಾರಣ ಇಬ್ಬರೂ ಬಡಕಲಾಗಿ ಮೂಳೆ ಚಕ್ಕಳ ಸ್ಥಿತಿಯಲ್ಲಿದ್ದರು. ರೋಗಿಷ್ಟ ಹುಲಿಯೊಂದು ಹಸಿದು ಕಂಗಾಲಾದಾಗ ಇನ್ನೇನೂ ಸಿಗದೇ ಅಜ್ಜಿಯ ಕರುವನ್ನು ಹಿಡಿಯಿತು. ಮಾಂಸದ ಲವಲೇಶವೂ ಇಲ್ಲ. ಮೂಳೆ ಅಗಿದು ಬಾಯೆಲ್ಲ ಗಾಯವಾಗಿ ಹೊಟ್ಟೆಯೂ ತುಂಬದೆ ಪರಿಪಾಟಲಾಯಿತು. ಅಯ್ಯೋ ನನ್ನ ಕರುವ ತಿಂದವರಾರು ಎಂದು ಗೋಳಿಡುವ ಅಜ್ಜಿಗೆ ನಾನೇ ಎಂದು ಸತ್ಯ ಹೇಳುವ ಬುದ್ಧಿ ಹುಲಿಗೆ ಯಾಕಾದರೂ ಬಂತೋ. ಸರಿ ಅಜ್ಜಿಯ ಗೋಳುಗರೆತ ಶುರು. ಹಗಲಿರುಳೆನ್ನದೆ ವರ್ಷಗಟ್ಟಲೆ ಅಜ್ಜಿಗೆ ಒಂದೇ ಕಾಯಕ 'ನನ್ನ ಕರೂನ ಯಾಕೆ ತಿಂದ್ಯೋ ಹುಲಿರಾಯ' ತಿಂದ ತೃಪ್ತಿಯೂ ಸಿಗದೇ ಕೊಂದ ಪಾಪವೂ ಕಳೆಯದೇ ಹುಲಿಯ ಪಾಡು ಹೇಳತೀರದು. ಅಜ್ಜಿಯನ್ನು ತಪ್ಪಿಸಿ ತಿರುಗಾಡುವುದೇ ಫುಲ್ ಟೈಮ್ ಜಾಬಾಯಿತು. ಈಗ ಹೇಳಿ ಇದು ಚಂಡವ್ಯಾಘ್ರನ ಮರಿ ಮೊಮ್ಮಗನ ಮರಿಯೇ?

ಪ್ರಸಿದ್ಧ ಕವಿಯೊಬ್ಬರಿಗೆ ಪರಿಶೀಲಿಸಿರೆಂದು ನನ್ನ ಕವಿತೆಗಳನ್ನು ರವಾನಿಸಿದ್ದೆ. ಅಭಿಪ್ರಾಯ ತಿಳಿಸುವಾಗ ಅವರಿಗೆ ಪೀಕಲಾಟಕ್ಕೆ ಇಟ್ಟುಕೊಂಡಿತು. ಕವನಗಳ ಹೆಸರಲ್ಲಿ ಓದುಗರ ಮಾರಣಹೋಮ ನಡೆಸಬೇಡ ಎಂದು ನೇರವಾಗಿ ಹೇಗೆ ಹೇಳಿಯಾರು? 'ನೀನು ಗದ್ಯವನ್ನೇಕೆ ಬರೆಯಬಾರದು? ಪದ್ಯ ಬರೆಯುವವರು ಗದ್ಯಕ್ಕೆ ಹೊರಳಿದರೆ ಅದ್ಭುತವಾದ ಸಾಹಿತ್ಯ ಸೃಷ್ಟಿ ಸಾಧ್ಯ' ಎಂದು ಪ್ರಿಯವಾಗಿ ನುಡಿದರು. ನಾಜೂಕಾಗಿ ಹೀಗೆ ಹೇಳಲು ಸಾಧ್ಯವಾಗುವುದು ಕೇವಲ ಪ್ರತಿಭಾವಂತ ಕವಿಗಳಿಗೆ ಮಾತ್ರ. ಅದಕ್ಕೆ ಅಲ್ಲವೇ 'ಎಲೈ ರಾಜನೇ ನಿನ್ನವರೆಲ್ಲ ನಿನ್ನ ಕಣ್ಣೆದುರೇ ಸಾಯುತ್ತಾರೆ' ಎಂದವನನ್ನು ಶೂಲಕ್ಕೇರಿಸಿದರು; 'ನಿನ್ನವರೆಲ್ಲರಿಗಿಂತಲೂ ಅಧಿಕ ಕಾಲ ಬಾಳುತ್ತಿ' ಎಂದವನನ್ನು ಸನ್ಮಾನಿಸಿದರು.

ಎಲ್ಲಕ್ಕಿಂತಲೂ ಘನಘೋರ ಅವಸ್ಥೆ ಹೊಸರುಚಿಯ ಹೆಸರಲ್ಲಿ ಬಗೆಬಗೆಯ ಭಕ್ಷ್ಯ ಸಿದ್ಧಪಡಿಸಿ ಅತೀವ ಅಕ್ಕರೆಯಿಂದ ಊಟಕ್ಕಿಕ್ಕಿ ಪಕ್ಕವೇ ಕುಳಿತು ಕಕ್ಕುಲಾತಿ ತೋರುವ ಸೌಟುಧಾರಿ ಅನ್ನಪೂರ್ಣೆಯರ ಎದುರಿಗೆ ಒದಗಿ ಬರುತ್ತದೆ. ಪ್ರೀತಿ ಇರಲೆಂದು ಚೆನ್ನಾಗಿದೆ ಅಂದರೋ ತಾಟು ತುಂಬಿ ಬಿಡುತ್ತಾರೆ. ಸತ್ಯಕ್ಕೆ ಶರಣಾಗಿ ತಿನ್ನಲಾರೆನೆಂದಿರೋ ಕೈಲಿರುವ ಸೌಟಿನ ವಿಭಿನ್ನ ನೆಲೆಯ ಉಪಯೋಗಗಳು ಹಾಗೂ ಪ್ರಹಾರಕ್ಕೀಡಾದ ಅಂಗೋಪಾಂಗ ವಿರೂಪ ವಿಕಾರಗಳು ನೆನಪಾಗಿ ಬೆವರು ಕಿತ್ತು ಬರುತ್ತದೆ. ಮಾತೃಸ್ವರೂಪಿ ಅನ್ನಪೂರ್ಣೆಯೇ ದುಷ್ಟ ಸಂಹಾರಿ ಭದ್ರಕಾಳಿಯ ಅವತಾರಿಣಿ ಎಂಬ ಪುರಾಣ ನಿರೂಪಿತ ಸತ್ಯವನ್ನು ಅಲಕ್ಷಿಸಲು ಸಾಧ್ಯವಿದೆಯೆ?

ಪಿ.ಎಚ್.ಡಿ. ಮಾಡುವಾಗ ಗೈಡೆಂಬೋ ಗುರುಗಳ ನಿವಾಸವೆಂದರೆ ಹಗಲಿರುಳೂ ಹೋಗಿ ಬರುವ ದೇವಸ್ಥಾನವಾಗಿತ್ತು. ಅವರ ಪತ್ನಿ ರಬ್ಬರ್ ಚೆಂಡಿನ ಅಣ್ಣನಂತಹ ಇಡ್ಲಿ, ರುಚಿ ಶಬ್ದದ ಸಮೀಪವೂ ಸುಳಿಯದ ಸಾಂಬಾರ್ ಮಾಡುವ ಪಾಕಕಲಾ ಪ್ರವೀಣೆ. ವಾತ್ಸಲ್ಯಕ್ಕೆ ಇನ್ನೊಂದು ಹೆಸರಂತಿದ್ದ ಗುರುಗಳು ಶಿಷ್ಯರ ಹೊಟ್ಟೆ ತುಂಬಿಸಿದ ನಂತರವೇ ಪಾಠ ಮಾಡುವ ಘೋರ ಪ್ರತಿಜ್ಞೆ ಮಾಡಿದ್ದರು. ಅನ್ನದಾಸೋಹದ ನಂತರವೇ

*PAGE DONATED BY : **SHRI N. R. HEGDE,** DOMBIVLI*

ಅಕ್ಷರ ದಾಸೋಹ. ತಿಂದರೆ ಕಾಯಿಲೆ. ತಿನ್ನದಿದ್ದರೆ ಗುರುಕೋಪ - ಶಾಪದ ಆ ಅಗ್ನಿ ಪರೀಕ್ಷೆಯಿಂದ ಪಾರಾಗಲು ಮುಕ್ಕೋಟಿ ದೇವತೆಗಳನ್ನು ವಿಭಿನ್ನ ಬೇಡಿಕೆಗಳಿಂದ ಪ್ರಾರ್ಥಿಸುತ್ತಿದ್ದೆ. 1. ಗುರುಪತ್ನಿ ತಿಂಗಳಗಟ್ಟಲೆ ಊರಿಗೆ ಹೋಗಲಿ. 2. ಗಂಡ ಹೆಂಡರಿಗೆ ಜಗಳವಾಗಿ ಆಕೆ ಮುಸುಗಿಕ್ಕಿ ಮಲಗಿ ಇಡೀ ದಿನ ಅಡಿಗೆ ಒಲೆ ತಣ್ಣಗಿರಲಿ. 3. ಅಡುಗೆ ಮಾಡಲೇ ಬಾರದೆಂದು ವೈದ್ಯರು ತಾಕೀತು ಮಾಡಲಿ 4. ಆಹಾರವನ್ನೇ ತಯರಿಸಬಾರದೆಂಬ ಹೊಸ ವ್ರತ ಹುಟ್ಟಿಕೊಳ್ಳಲಿ 5. ಹೊರಗಿನವರಿಗೆ ಏನೂ ತಿನ್ನಲು ಕೊಡಬೇಡವೆಂದು ಅವರ ಮನೆದೇವರು ಕನಸಿಗೆ ಬಂದು ತಾಕೀತು ಮಾಡಲಿ. ಹೀಗೆಲ್ಲ ಬೇಡಿಕೊಂಡೆ. ಆದರೆ ಸಂಕಟ ಬಂದಾಗ ಮಾತ್ರ ತನ್ನನ್ನು ಕರೆವ ನನ್ನಂತಹ ಪಾರ್ಟಟೈಂ ಭಕ್ತಳ ದಿಢೀರ್ ಪೂಜೆಗೆ ಯಾವ ದೇವರೂ ಸೊಪ್ಪು ಹಾಕಲಿಲ್ಲ. ಆಗಿನ ನನ್ನ ಸ್ಥಿತಿ 'ಪಿಎಚ್.ಡಿ. ಮಾಡು ಅಂದರೆ ಮಡಿ'.

ತಾನು ಕೆಲಸ ಮಾಡಿದ ಎಲ್ಲ ಕಚೇರಿಗಳಲಿ ಪ್ಯೂನನಿಂದ ಪ್ರಾಚಾರ್ಯರ ತನಕ ಆಬಾಲ ವೃದ್ಧರೆನ್ನದೇ ಗಂಡೆಂಬೋ ಕುಲಕೋಟಿಯ ನಿದ್ದೆ-ಬುದ್ಧಿ ಇತ್ಯಾದಿ ಕೆಡಲು ಸಾಧ್ಯವಿರುವುದನ್ನೆಲ್ಲ ಮಾಡಿದ ಖ್ಯಾತಿಯಿರುವ ಗುಮಾಸ್ತೆ ಒಬ್ಬಳು ಒಮ್ಮೆ ವರ್ಗಾಯಿಸಲ್ಪಟ್ಟು ನಮ್ಮಲ್ಲಿಗೆ ಬಂದಳು. ರಿಟೈರಾಗಲು ಎರಡೇ ವರ್ಷವುಳಿದ ಪ್ರಾಚಾರ್ಯರ ಪತ್ನಿ ನನಗೆ ಪರಿಚಿತೆ. ಅವರಿಗೆ ನಾನು ಅಪಾರ ವಿಶ್ವಾಸವನ್ನಿಡಬಹುದಾದ ದಾಂಪತ್ಯ ಕೋಣೆಯ ಬಿರುಕು ತುಂಬುವ ಸಿಮೆಂಟಿನ ಉಗ್ರಾಣವಿಟ್ಟುಕೊಂಡ ನಂಬಿಗಸ್ಥ ಪ್ರಾಣಿಯಂತೆ ಯಾವ ಕೋನದಿಂದ ಕಂಡೆನೋ ಗೊತ್ತಿಲ್ಲ. 'ಸ್ವಲ್ಪ ನಮ್ಮನೆವ್ರ ಮೇಲೆ ನಿಗಾ ಇಡಮ್ಮ' ಎಂದು ಗಂಟು ಬಿದ್ದರು. ಹಗಲಿರುಳೂ ಫೋನು ಮಾಡುವುದು, ಗೋಗರೆಯವುದು, ಆಯಾ ದಿನದ ವಿಶೇಷ ವರದಿ ಕೇಳುವುದು, ಪಾಠ ಮಾಡುವುದು ಬಿಟ್ಟು, ಛೇಂಬರಲ್ಲಿ ಇಣುಕಿ ರೋಚಕ ದೃಶ್ಯಗಳ ವರದಿ ತಯಾರಿಸುವ ಚಾಕಚಾಕ್ಯತೆಯೂ ಜಾಯಮಾನದಲ್ಲಿಲ್ಲದ ನಾನೇನು ಮಾಡಲಿ? 'ಅಮ್ಮಾ ತಾಯಿ ನಿನ್ನ ಗಂಡನೆಂಬ ಪ್ರಾಣಿ ಯಾವ ಹೆಣ್ಣು ಜೀವಿಯೂ ಕಣ್ಣೆತ್ತಿ ನೋಡಬೇಕೆಂದೆನಿಸದ ರಸಹೀನ ಆಕಾರದ ಸ್ವಾರಸ್ಯಗೇಡಿ. ಗಂಡನಾಗಿ ಮೂರು ದಶಕ ಉಸಿರಾಡಿಸಿಕೊಂಡಿರುವ ಬಡಪಾಯಿ ಕೊನೆಗಾಲದಲ್ಲಾದರೂ ಚೂರುಪಾರು ಚಕ್ಕಂದವಾಡಿಕೊಂಡರೆ ನಿನ್ನ ಆರು ಮಕ್ಕಳ ಸಂಸಾರಕ್ಕೇನೂ ತೊಂದರೆ ಇಲ್ಲ ಎಂದು ಹೇಳಲು ಧೈರ್ಯ ಸಾಲದೇ ತೆಪ್ಪಗೆ ಇದ್ದೆ.

*ಆಧಾರ : ಮಿನುಗೆಲೆ ನಕ್ಷತ್ರ*

# ಅನಿರೀಕ್ಷಿತ...

**- ಗಿರಿಜಾ ಶಾಸ್ತ್ರಿ**

ಎದುರಾಗಬಹುದೇ ಹೀಗೆ
ಸದ್ದಿಲ್ಲದೆ ಹಿಂಬದಿಯಿಂದ ಬಂದು
ಮೆಲ್ಲನೆ ಭುಜ ತಟ್ಟಿದ ಹಾಗೆ
ನೂರ ಅರವತ್ತರಲ್ಲಿ ಓಡುವ ಗಾಡಿ
ಗಕ್ಕನೆ ನಿಲುಗಡೆಗೆ ಬಂದ ಹಾಗೆ
ಧಡಕ್ಕೆಂದ ಕ್ರೀಂ...ಚ್ ಸದ್ದು
ಎದೆ ನಡುಗಿಸುತ್ತದೆ ಇನ್ನೂ
ಯಾರು ನೀನು?

ಮೂವತ್ತು ದಾಟಿದ ವಸಂತ ಮುಖ
ತಲೆ ತುಂಬಾ ಕಪ್ಪು ಜೊಂಪೆ ಕೂದಲು
ಕರ್‍ರನೆ ಮಿರುಗುವ ಗಡ್ಡ
ಆರು ಫೂಟು ಉದ್ದೋ ಉದ್ದ ಮಲಗಿದ್ದಿ
ರಸ್ತೆಯ ಬದಿ
ಉಕ್ಕುವ ಚೈತನ್ಯಕ್ಕೇ ಭಾಷ್ಯ ಬರೆದಂತೆ
ನೀನು ಬಂದಿರುವುದೇ ಸುಳ್ಳೆಂಬಂತೆ....

ಯಾವ ತಾಯಿ ಹೆತ್ತ ಕನಸೋ ಏನೋ
ಹಗಲು ಹರಿಯುವಷ್ಟರಲ್ಲೇ
ಹರಿದು ಛಿದ್ರವಾಗಿ ಹೋದ ಹಾಗೆ
ಎದೆ ಬಿರಿಯುವ ನೀನು
ಯಾರೋ ಏನೋ
ನನಗೂ ನಿನಗೂ ಅಂಟಿದ ಪರಿ ಬಲ್ಲೆನೇನು
ನಿನ್ನ ವರಾತ ನಿಲ್ಲದೇನು

ಹೂ ಬಿಟ್ಟ ಹೊಕ್ಕಳಿದು
ಕರುಳನ್ನೂ ಕತ್ತರಿಸಿ ಕೊಟ್ಟಿದೆ
ತತ್ತರಿಸುವ ಈ ತಡಿಕೆ
ನಿಲ್ಲಬಹುದೇ
ನಿನ್ನ ಝಂಝೂವಾತದೆದುರಿಗೆ

ಈ ಕಣ್ಣುಗಳನ್ನು ಬೇಕಾದರೆ ಕಿತ್ತುಕೋ
ಆದರೆ ಕನಸುಗಳನ್ನು ಮಾತ್ರ ಬಿಟ್ಟುಬಿಡು ★

## ಡಾ. ವ್ಯಾಸರಾವ್ ನಿಂಜೂರುರವರಿಗೆ ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿ ಪ್ರಶಸ್ತಿ

2015-2016ರ ಸಾಲಿನ ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿ ಪ್ರಶಸ್ತಿಗೆ ಡಾ. ವ್ಯಾಸರಾವ್ ನಿಂಜೂರುರವರು ಆಯ್ಕೆಯಾಗಿದ್ದಾರೆ. ಸಾಹಿತ್ಯ ಕ್ಷೇತ್ರದಲ್ಲಿ ಅವರ ದೀರ್ಘವಾದ ಸಾಧನೆಗಾಗಿ ಅವರನ್ನು ಜೂನ್ 26, 2016 ರಂದು ಹವ್ಯಕರ ಸಭಾಗೃಹ ಘಾಟ್ಕೋಪರ್‌ನಲ್ಲಿ 'ಶ್ರೀ ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿ' ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುವುದು.

ಡಾ। ವ್ಯಾಸರಾವ್ ನಿಂಜೂರ್‌ರವರಿಗೆ ಅಭಿನಂದನೆಗಳು.

## DONATIONS

**Havyaka Welfare Trust**

1. Umesh S. Hegde, Dombivli — Rs. 5,000

**HWT. - Women Welfare Cell**

1. Ramachandra & Aruna Hegde, Thane — Rs. 30,000
2. Ramachandra & Madhuri Hegde, U.S.A. — Rs. 10,000

# THE ATTITUDE OF A PIOUS PERSON

By : **Prof. Vidwan V. N. Bhat**
Translated by : **K. Padmanabha Udupa**

अभिवादनशीलस्य, नित्यं वृद्धोपसेविनः।
चत्वारि तस्य वर्धन्ते, आयुर्विद्यशोबलम् ॥

- सुभाषितरत्नभांडागारम्

''Abhivaadana Shilasya
Nithyam Vridhopa Sevinaha
Chatvari Tasya Vardhante
Aayur Vidya Yashobalam''

- Subhashita Ratna Bhandagaram

"One who has the temperament to respect the deserving, who constantly serves the elders with humility, will be blessed with the following four benefits- longevity, knowledge, fame and strength".

One should bend like a bow before the elders, however big he may be. He should never be haughty and egoistic. When the paddy plant is full of corns, it bends, the banana plant full of Bananas bends, Mango tree filled with fruits bends. If this egoistic body does not bend it is most improper. When one prostrates before the elders, automatically, one receives blessings with spontaneous expressions like 'May you live long', May you become learned', 'May you become famous' etc., when youngsters seek blessings, the elder's hearts would bloom and they would wish the welfare of the youngsters with a moving heart.

The moment they got up, our ancestors used to prostate to their elders, to the earth and to the sun. The present generation feels some what embarrassed to prostate. As poet D.V.G. says 'old devotion and belief has vanished; no new light has dawned till now; the world is in a turmoil, like a blindand lame person caught up in a dilapidated house'.

Whether it is the influence of the time or the influence of Western Civilisation, many have no mind to serve the aged and the elderly people. The moment one marries, a person feels that his parents are an obstacle in the house. As a bird flies away soon after its feathers become strong, people leave their aged parents to their fate and live seperately. Old age homes are on the rise. The adage 'Putro Rakshati Vaardhkye' (sons take care of the parents at their old age) has become a mirage.

When we serve our elders, we must remember that we too will reach that stage one day or the other. There is always a 'day for the mother-in-law and a day for the daughter-in-law'. Just as we desire that our children should look after us at our old age, we too should set an example by looking after our elders. What good are children who do not bring happiness to the parents whey they are aged? A coconut plant which receives water from us gives us sweet tender coconut when grown up. A small plant fed with mud and water, gives us delicious fruits later. A calf reared with grass and water, yields pure and tasty milk, when it grows into a cow. As Wordsworth says 'Nature is our teacher'. The sense of gratitude found in animals and plants is a great lesson to a man. ' Mother gives birth to children, feeds breast milk, suffers untold hardship. The parents make children educated by begging or borrowing; when you grow up and they become old to look after them with tenderness. Sacrifice a bit and attain God hood' (from the book 'Chaitrasri' Written by Sri V.N.Bhat). This attitude of Sacrifice is the hall mark of our culture. When we preserve and nurture this attitude it increases our longevity, gives a meaning to our learning, we acquire divine strength, moral courage and virtue.

(Source : "Jnana Deepa")

---

# ಬಾ ದುರ್ಮುಖ

- ಗೋಪಾಲಕೃಷ್ಣ ಹೆಗಡೆ, ಕೇರಿಮನೆ

ಬಾ ಬಾರೋ ದುರ್ಮುಖ
ನವ ವರುಷ ನಿಯಾಮಕ

ಮರೆಗೆ ಸರಿದ ಮನ್ಮಥ
ಕರವನೆತ್ತಿ ಬೀಸುತ
ಮರಳಿ ಬರುವೆನೆನ್ನುತ
ಕಾಲ ಪಥದ ಸಂಗತ

ಅಗೋ ಬಂದ ದುರ್ಮುಖ
ನಮ್ಮ ನಿಮ್ಮ ಸಮ್ಮುಖ
ಅರವತ್ತರ ಸ್ವಾಗತ
ಅಂತರಂಗ ಸಂಭ್ರತ

ಶಾಂತಿ ಸುಖ ಪ್ರದಾಯಕ
ಲೋಕಹಿತ ಪ್ರಸಾರಕ
ಸುಜನ ಪ್ರೀತಿ ಪೋಷಕ
ನವೋಲ್ಲಾಸ ಚೋದಕ

ಹೆಸರಿಗಷ್ಟೆ ದುರ್ಮುಖ
ಹೃದಯವಂತ ಶ್ರೀಮುಖ
ಯೋಗಕ್ಷೇಮ ವಾಹಕ
ಜೀವ ಸಖನು ದುರ್ಮುಖ

ಬಾ ಬಾರೋ ದುರ್ಮುಖ
ನವ ವರುಷ ನಿಯಾಮಕ ★

# Honey Water

Information : **R.P. Hegde**

Honey water is a remarkable drink, brimming with nutritional ingredients that will give your body energy and a health boost early in the morning. The best part is that all you need to make it is a tablespoon of honey and a cup of luckwarm water. This delicious beverage is refreshing in the summer, a real treat in the winter and a true wonder cure for a variety of ailments. If you are still not convinced, here are 9 reasons you should make honey water your drink of choice in the morning.

**1. Watch as your Weight drops :** Drinking honey water can help you lose Weight, despite the sweetness of the drink. The natural sugar in the honey is much healthier than the processed white sugar or corn syrup that is used in soft drinks and is a healthier source of calories. By replacing soft drinks with honey water you'll see a difference, although not overnight.

**2. Maintain healthy bowels :** Some people are shy about this topic, but there is no shame in discussing it. One cup of honey water a day will help your digestive system and keep you regular. The antibacterial properties of honey help prevent stomach aches and indigestion and help the body strengthem your stomach's lining.

**3. Boost Your Immune System :** Honey is a natural antibacterial substance and is also full of enzyems, vitamins and minerals all of which help protect your body against germs, particularly organic honey. Several studies have shown that Manuka honey a unique honey made from a plant in New Zealand, can kill even antibiotic resistant bacteria and can be used as a natural cure for Helicobacter.

**4. Reduce Allergy Symptoms :** Studies have shown that eating locally produced honey helps the body get accustomed to the local pollen, reducing allergy symptoms. If you suffer from seasonal allergies, drink a cup of water with local honey.

**5. Healthy Energy Boost :** Even mild dehydration can lead to you feeling tired, so imagine what a cup of water and honey can do to your energy levels. Unlike coffee, the energy boost doesn't subside. Instead, the body remains energized for a prolonged period of time.



**6. Say Goodbye to Sore Throats :** Every grandmother will tell you that honey is the perfect remedy for a sore throat and coughing. Drinking honey water will create a type of coating around your esophagus, which will calm any coughing and pain, creating a smooth, pleasant sensation in your throat.

**7. Detox :** Honey water helps fulsh toxins out of your body, both by helping your colon as well as by its antibacterial properties. Detoxing your body regularly helps you feel better and prevents intections. To boost the detox add some freshly squeezed, lemon to your honey water. Lemons too contain antibacterial properties, are diuretic and aid liver functions.

**8. Less Bloating :** Feeling bloated and gassy? A cup of honey water will help neutralize the gas, reducing the bloated sensation. It is highly recommended that you drink it after a big meal.

**9. Keeps your Heart Healthy :** Above all of its other advantages, honey water helps in raising your 'good' cholesterol (HDL) levels. Further more it prevents the body from producing stress hormones, which put presure on the heart and cardiovascular system.


## *Matrimonial*

"Alliance invited for a Havyaka Brahmin Boy, born on 12/07/90, handsome, M.tech (Comp Eng), Working in Mumbai.

***Please Contact :***

**85509 94956 / 73873 99355**


*PAGE DONATED BY :* ***SHRI S. M. HEGDE,*** *SANTACRUZ*

# Event Horizon

✍ **L. V. Shastri, Bangalore**

Event horizon is a technical term in the field of Cosmology, the science dealing with study of cosmos. It is 'the boundary of a black hole'. Black hole in turn is 'a region of space-time from which nothing, not even light can escape, because gravity is so strong'. The number of black holes in the universe is considered to be very large. Any passing celestial object that comes at the event horizon gets sucked into the black hole for ever.

With the backdrop of vast - very very vast - cosmos, we get down to humans - event horizons in human living! I for one have been always impressed, in fact amazed, at so many parallels between what goes on in Nature, open to every day observation / experience, and the events in an average human life. Take the all too obvious life cycle of a flower, for example. Initially it is a bud, slowly growing and expanding into a flower. The young flower basks in sunlight, dancing as it were in the passing breeze, staying put like this for a while and then slowly, yet surely folding up, withering and falling down only to bite the dust. In some cases, like rose, the lovely bud comes out in an environment which is complete with thorns; it manages to grow nonetheless, negotiating the thorns. The life cycle of humans is no different.

Coming to humans vis-à-vis Nature, it can be proposed, as a thought, that human beings are also part of Nature although Nature is generally referred to and regarded as extra-human. Indic philosophy holds that everything in creation is made up of different combinations of the well-known five basic elements - 'pancha maha bhootas'. This would include the mortal part of a human being, human body to be specific. Then there is the immortal aspect, individual soul, 'Jeevatma', which is believed to be part of universal soul, Paramatma - the very basic principle of entire creation / cosmos. With this background, human being becomes very much a part of everything else around that goes by the name 'Nature'.

Coming to event horizons, parallels can be drawn between the cosmic phenomenon and human living - in our relationships, to be more specific. Love and hate are among the strongest emotions in human being. It is generally on the emotional plane that event horizons arise in our lives. Take the case of the alluring Love. Saints and preachers tell us that filling our psyche with 'unconditional love' is sure way to live a joyful life and then on experience Divinity. In cosmic parlance, it is getting positioned in the orbit of 'unconditional love' and then reaching an event horizon with Divinity at the center. That could well be. Yet, practicing 'unconditional love' as a routine is a tough proposition, given the harsh realities of day to day living, where our emotions at any given time are dictated by real life situations.

As we all know, the attitude and the response to a situation happens to be person-specific. No two persons may look upon a situation / problem in identical way even in a small cluster of individuals - a family unit for example. One or more among them may reach 'event horizon' as it were. Others can only do well to compromise with or adjust to the situation / event. As an example, take the case of two young hearts 'falling in love'. The 'falling' generally starts slowly, increasing in intensity until the two reach a point when they can not -rather do not like to - escape from committing to lifelong relationship, all the while experiencing divine like joy and happiness. We may say they reach an 'event horizon'! All those who might have tried their best to prevent the 'falling' can only watch it happen, even if haplessly!

Another equally strong emotion, viz., Hate would also present inescapable boundaries. The fire of hate also generally starts slowly, often fuelled by very petty and ignoble issues, grows in intensity and consumes the nectar of peace of mind - too precious a commodity indeed. The hate may grow to 'fight to finish' level and thus may suck the individuals concerned into an 'event horizon' for life! Eventually all the persons concerned may feel like losers and even hopelesly regretful.

Another case that can be cited is telling a lie and being false witness in a legal issue. When one gets committed to such a stand, there is no escape, the event horizon appearing immediately. This may not affect the ultimate judgment to be passed, but the liar is branded for life in his society.

The above are but a few instances where 'event horizon' comes into play for human situations in the drama of life, much like the cosmic drama in the vast outer space. Many other instances can be envisaged. However, it may be fair to say that for most situations, adequate caution has to be exercised to keep safe distance from any impending 'event horizon'. Because the consequences of touching an event horizon could be unpredictable, varying from good to bad or ugly. To put it in familiar words, it is best to be 'moderate' in whatever we indulge in or act upon! Or, as one might say, 'moderation is the name of the game'

Ps : Of late, the stand that nothing can escape, even slightly, out of the event horizon envelope of a black hole has been questioned. Such developments are not new in frontier areas of science.

*PAGE DONATED BY :* ***SMT. SHANTA V. HEGDE,*** *CARMICHAEL ROAD*

# One Way of Serving the Nation

✍ **B. N. Bhagwat**

'Last month my wife and I were fortunate to be invited to a pleasant and educative get together Women Convention under the auspices of Havyaka Welfare Trust. All women achievers spoke very well. I have to thank Amitaji and Shivkumar for opening this window for us.During the course of informal conversation I realised that in spite of the presence of many knowledgeable and articulate young persons among Havyakas, very few have chosen to take the tests and attempt to join the Indian Administrative Service and the other civil services of Central Government. Hence this brief exercise to give some inputs.

Since I myself retired many years ago, I am not fully familiar with the current formats and modalities of the examination. In any case all that information is readily available on the UPSC website. Incidentally the Union Public Service Commission which is the constitutional body in charge of the whole process has maintained high credibility over the years. As you are aware, there are the All India services- the Indian Administrative Service, the Indian Foreign Service and the Indian Forest Service and then Indian Police Service as well as a number of central services like Revenue, Customs and Excise, Postal, Railways etc. The required educational qualification and the age limit have been spelt out.

The nature of question papers ( after eliminating candidates in the preliminary process ) seems to have evolved over the years. The purpose is to assess general knowledge and sound common sense, ability to express your thoughts clearly and cogently in an Essay, and above-average mastery in one or two specialised disciplines of your choice. Through the mechanism of written papers as well as the viva-voce the Commission tries to gauge the suitability of the candidate to take up the challenges in his future jobs after training.

While a few Havyaka aspirants may choose the option of writing the main papers in an Indian language other than English,I would like to emphasise the importance of English in the world of competitive examinations. Most of the standard books on modern Indian history, science and technology, geography, Constitution, are in English and they are mandatory reading for you. I would also recommend the habit of writing regularly so you remain in practice.

Here I want to express some random thoughts on the process of Interview since I have some experience both as a candidate and as a member of the UPSC panel of interviewers for a couple of years in the nineties after retirement. Here again the modern young boys and girls know the basic requirement of punctuality, proper but not flashy dress and the mode of greeting the panelists while entering the room. Incidentally those who have not gone to Delhi before must note that winters are severe and one has to be adequately protected otherwise you may shiver more through cold than anxiety!

While approaching the Board one should be neither nervous nor overconfident. Your inherent merit will be recognised. The members are experienced enough to distinguish the chaff from the grain and even if you stumble a little or feel unlucky to get some tough questions, they may not judge you too harshly in their overall assessment. Of course everybody is not as readywitted as the young man who was told that he will be asked only one question. 'Can you point out the exact centre of this table?' In reply to which the candidate put his finger on an approximate point at random. 'How can you be sure?' they asked. His counter : 'Sir, you said only one question!'

The common practice at interviews is to ask gentle questions on the basis of candidate's biodata which is in front of everyone and ask him to elaborate on his background or educational achievements. So you must remember what you have written and anticipate possible clarifications. In the column for hobbies and extra curricular activities sport, music, reading are often mentioned. This can be slightly tricky. In one of the interview boards (not UPSC) of which I was member,the question about your favourite sport almost always elicited the hackneyed answer: Cricket. And the favourite player invariably Tendulkar. But when asked 'in how many ways a batsman can get out?' most did not go beyond five (there are nine ways.)

Tell us about the last book you read is also one of the usual questions for which one needs to be reasonably prepared.You are naturally expected to be aware about current issues, your State and important personalities, the broad features of governance structure under the Constitution etc. They may also ask you about your views on some current topic, only to find out whether you have a constructive approach in your thought process.

In the same vein a panelist can ask about how you would tackle the situation if confronted with a crisis like

a mob morcha or famine like condition etc. If you are in position of authority. Here the expectation from you is only that you know about the various relevant factors on the ground and proceed accordingly.

It is also not uncommon to ask the candidate to talk on any subject of his choice for a few minutes. Above all don't try to bluff. Even the eminent panelists are not fully knowledgeable about everything. They appreciate if you are candid enough to say'I don't know, but would like to learn'.

The successful candidates selected for the Indian Administrative Service are invited,after some routine verification,to the Lal Bahadur Shastri Academy of Administration at Mussoorie for one year's training and orientation. For most probationers this remains one of the most cherished periods of life as they are exposed to a new, vibrant milieu and make friends from different States and backgrounds.

During the course of the year the candidate is allotted to a State cadre and he reports to that State after completion of training in Mussoorie. Though IAS is an all-India service, the officer serves the State and the Nation in districts and various capacities in the allotted State for bulk of the time but can be deputed to the Centre for fixed periods. This helps the Union Government to frame policies and implement them with States' perspective. In that sense the IAS is unique in the world where such a seamless arrangement for the administration of a large country is attempted. Incidentally as more and more professionally qualified persons are appearing for UPSC exams there is considerable scope for the IAS officers to specialise,as they rise higher,while retaining the merits of generalist approach.

I hope some of our young public-spirited persons are persuaded to seek these career options.


### HAVYAKA MARRIAGE BUREAU

The profiles of prospective brides and bridegrooms are updated and hard copies are kept ready at Kalina Office. Website is also updated accordingly. Those interested may refer to website and also visit Kalina Office.

**CHIDANANDA BHAGWAT - 98192 85372**
**Convener**
**Marriage Bureau**


## ಬದುಕು ಕನಸೇ?

**– ಡಾ। ಎ. ಕೆ. ಶಾಸ್ತ್ರಿ, ಶಿರಸಿ**

ಈ ದೇಹವು, ಈ ಆಸೆಯು, ಬದುಕೆಲ್ಲವೂ ಕನಸಾಗಿದೆ
ಈ ಬಾಳ ನೌಕೆಯಲಿ ಪಯಣ ಮಾಡಿ ಬಹುದೂರ ಬಂದಾಗಿದೆ
ಬಾನಂಚಿನಲ್ಲಿ ಸೂರ್ಯಾಸ್ತದಲ್ಲಿ ಕಡಲು, ಆಗಸ ಕೂಡಿ ಒಂದಾಗಿದೆ

ಈ ಜಲಸಂಧಿಯಲ್ಲಿ ಅಲೆಗಳ ಏರಿಳಿತ ಬೋರ್ಗರೆತ ಕೇಳುತ್ತಿದೆ
ಹಿಮ್ಮೆಟ್ಟಿ ತೆರೆಗಳ ಈ ಬಾಳ ನೌಕೆಯು ತೇಲುತ್ತ ಮುಂದಕ್ಕೆ ಸಾಗುತ್ತಿದೆ

ಕಡೆಮೊಡವಿನಲ್ಲಿ ಜಲಚರ ಜೀವಿಗಳು ಸ್ವಚ್ಛಂದದಿಂದಲಿ ಈಜುತ್ತಿವೆ
ಒಂದನ್ನು ಇನ್ನೊಂದು, ಇನ್ನೊಂದು ಮತ್ತೊಂದು ನುಂಗುತ್ತ ಈಜುತ್ತ ಬದುಕುತ್ತಿವೆ

ಎಳೆ ಬಿಸಿಲು, ಉರಿಬಿಸಿಲು, ಇಳಿಬಿಸಿಲುಗಳ ದಾಟಿ ಮಂದ ಮಾರುತವೀಗ ಬೀಸುತ್ತಿದೆ
ಮುಸ್ಸಂಜೆ ಸರಿದಾಗ, ಇರುಳು ಧರೆಗಿಳಿದಾಗ ಕತ್ತಲಲಿ ಈ ಜೀವ ತಡಕಾಡಿದೆ

ಈ ಭೂಮಿ, ಆಕಾಶ, ಈ ಅಗ್ನಿ, ಈ ವಾಯು, ಜಲಕೆಲ್ಲ ಈ ದೇಹ ಋಣಿಯಾಗಿದೆ
ಬ್ರಹ್ಮಾಂಡವು, ಭೂಲೋಕವು ಚಿತ್ತಾರ ಚಿತ್ತದಲಿ ಪಡಿಮೂಡಿದೆ
ಈ ದೇಹವು, ಈ ಆಸೆಯು, ಬದುಕೆಲ್ಲವೂ ಕನಸಾಗಿದೆ


UIL

UGRU INDUSTRIES

*With Best Compliments from*

UGRU INDUSTRIES
**Manufacturers of Speciality food products**

Industrial Estate, Kumta,
North Kanara District, Karnataka

Plot Q1 & 2, Industrial Estate,
Hegde Road, Kumta, North Kanara District,
Karnataka - 581343, India.
Tel. & Fax : 08386-223-832
E-mail: ugruind@yahoo.co.in

*ADVT.*

# ಎಲ್ಲರ ಮನೆ ಕಾರಿಗೂ ನೆಗ್ಗು

ವಸುಧೇಂದ್ರ

'ಕೆಟ್ಟ ಮೇಲೆ ಬುದ್ಧಿ ಬಂತು' ಅಂತ ಹಿರಿಯರು ಹೇಳೋದು ಸುಳ್ಳಲ್ಲ ಬಿಡಿ. ಗೆಳೆಯರೆಲ್ಲಾ ಗಿಣಿಗೆ ಹೇಳಿದಂತೆ ಹೇಳಿದರು 'ಬನ್ನೇರುಘಟ್ಟ ರಸ್ತೆನಾಗೆ ಮನೆ ಇಟ್ಟುಕೊಂಡು ಕಾರು ತೊಗೊಳ್ಳುವಂತಹ ಮೂರ್ಖತನ ಮಾಡಬೇಡ' ಅಂತ. ಹಾಗಂತ ನಾನೇನೂ ಅವರ ಮಾತನ್ನ ಕಿವಿಗೆ ಹಾಕಿಕೊಳ್ಳಲೇ ಇಲ್ಲ ಅಂತ ನೀವು ಅಂದುಕೊಳ್ಳಬೇಡಿ. ಮೂರು ವರ್ಷದಿಂದ ಅವರ ಮಾತನ್ನು ವಿಧೇಯನಾಗಿ ಕೇಳುತ್ತಾ ಬಂದಿದ್ದೆ. ಆದರೆ ಈವತ್ತಿಗೂ ಅವರು ಅದೇ ಮಾತನ್ನು ಹೇಳ್ತಾ ಕೂತರೆ ಯಾರಿಗೆ ತಾನೆ ರೇಗಲ್ಲ ಹೇಳಿ? ಮನೆಗೆ ಬಂಧು-ಬಳಗದ ಹೆಸರಿನಲ್ಲಿ ಬಂದುಳಿಯುವ ದಪ್ಪ ದಪ್ಪ ಹೆಂಗಸರು ವಾಪಾಸು ಹೋಗುವಾಗ ನಾನು ಆಟೋ ಹತ್ತಿಸಿದರೆ 'ಇನ್ನೂ ಕಾರು ತೊಗೊಂಡಿಲ್ವಾ?' ಅಂತ ರಾಗವಾಗಿ ಕೇಳಿದಾಗ ನನಗೆ ಹೇಗಾಗಬೇಡ ಹೇಳಿ? ಮತ್ತೊಬ್ಬರ ಮನೆಗೆ ಹೋದ ತಕ್ಷಣ ಹೆಲ್ಮೆಟ್ ತೋರಿಸಿ ಎಲ್ಲಿಡಲಿ ಎಂದಾಗ ಅವರ ಮುಖದಲ್ಲಿ ನನ್ನ ಬಳಿ ಕಾರಿಲ್ಲವೆಂಬ ತುಚ್ಛ ಭಾವ ಸುಳಿದು ಹೋಗುವುದು ನನಗೆ ತಿಳಿಯುವುದಿಲ್ಲವೇ? 'ನನ್ನ ರೊಕ್ಕ, ನನ್ನಿಷ್ಟ' ಅಂತ ನಿರ್ಧರಿಸಿ ಕಾರನ್ನು ತೆಗೆದುಕೊಳ್ಳುವ ನಿರ್ಧಾರವನ್ನು ಘಂಟಾನುಘೋಷವಾಗಿ ಎಲ್ಲರ ಮುಂದೂ ಹೇಳಿಬಿಟ್ಟೆ, 'ವಿನಾಶ ಕಾಲೇ ವಿಪರೀತ ಬುದ್ಧಿ'. ಹೋಗಲಿ, ಯಾವ ಯಾವ ತರಹದ ಇನ್ಶೂರನ್ಸ್ ಇವೆಯೋ ಎಲ್ಲಾ ತಗೋ' ಎಂದು ಹೇಳಿ ಎಲ್ಲಾ ಹಿತೈಷಿಗಳೂ ಸುಮ್ಮನಾದರು.

ಬರೀ ಎಲ್ಲರ ವಿರೋಧಗಳೇ ತುಂಬಿದ್ದರೆ ನನಗೂ ಧೈರ್ಯ ಬರುತ್ತಿರಲಿಲ್ಲವೇನೋ! ಒಂದಿಬ್ಬರು ಮಾತ್ರ 'ಕಾರು ತೆಗೆದುಕೊಳ್ಳಿ, ಅದಕ್ಕೇನಂತೆ' ಎಂದು ಸಲಹೆಯನ್ನೂ ಕೊಟ್ಟರು. ಅಂತಹ ಅಮೃತ ಸಲಹೆಯನ್ನು ಕೊಟ್ಟ ಮೊದಲನೆಯ ವ್ಯಕ್ತಿ ಮೆಕ್ಯಾನಿಕ್ ಅಂಗಡಿಯನ್ನಿಟ್ಟುಕೊಂಡಿರುವ ಇಸ್ಮಾಯಿಲ್. ಮೂರು ವರ್ಷದ ಹಿಂದೆ ಬರೀ ಪಂಕ್ಚರ್ ಅಂಗಡಿಯೆಂದು ಅದೇ ರಸ್ತೆಯ ಮರದ ಕೆಳಗೆ ಕೂಡುತ್ತಿದ್ದವನು ಈಗ ಅವನೇ ಹೊಸದೊಂದು ಕಾರನ್ನು ಕೊಳ್ಳುವಷ್ಟು ವ್ಯಾಪಾರ ಕುದುರಿದೆ. ಐ.ಐ.ಎಂ.ನ ಚಿಳ್ಳೆ-ಪಿಳ್ಳೆಗಳು ರಾಸ್ತಾ ರೋಕೋ ಅಂತೆಲ್ಲಾ ಮಾಡಿ ಬನ್ನೇರುಘಟ್ಟ ರಸ್ತೆ ಕೆಲವೇ ವಾರಗಳಲ್ಲಿ ಕರೀನಾ ಕಪೂರ್ ಕೆನ್ನೆಯ ಹಾಗೆ ನಳನಳಿಸುತ್ತದೆ ಅಂತ ಪತ್ರಿಕೆಯಲ್ಲಿ ಬಂದಿದ್ದೇ ನನ್ನ ಮನೆಗೆ ಓಡೋಡಿ ಬಂದಿದ್ದ. 'ಬಡವರ ಹೊಟ್ಟೆ ಮೇಲೆ ಬಟ್ಟೆ ಹಾಕ್ತಾ ಇದ್ದಾರಲ್ಲಣ್ಣ. ಮೂರು ವರ್ಷದಿಂದ ಅಲ್ಲಾನ ದಯದಿಂದ ವ್ಯಾಪಾರ ಚಂದಾಗಿ ಆಗ್ತಾ ಐತೆ ಅಂತ ನೆಮ್ಮದಿಯಾಗಿದ್ದೆ. ಯಾರ ಬೂರಿ ನಜರ್ ಬಿದ್ದಿತ್ತು ಹೇಳಣ್ಣಾ' ಎಂದು ಗೋಳೋ ಎಂದು ಮರುಗಿದ. ಆದರೆ ಮೂರು ತಿಂಗಳಾದರೂ ರಸ್ತೆ ಓಂಪುರಿಯ ಕೆನ್ನೆಯಂತೇ ಯಥಾ ಪ್ರಕಾರ ದಲ್ಲಿರುವುದನ್ನು ನೋಡಿದ ಮೇಲೆ ಅವನ ಬಿ.ಪಿ. ಸ್ವಲ್ಪ ಹತೋಟಿಗೆ ಬಂದಿತ್ತು. ಅಂತಹ ಇಸ್ಮಾಯಿಲ್ 'ಕಾರು ತೊಗೊಳ್ಳದಕ್ಕೆ ಯಾಕಣ್ಣಾ ಹೆದರ್ತಿ? ನನ್ನ ವರ್ಕ್‌ಶಾಪ್ ಇಲ್ವಾ? ವಾರಕ್ಕೊಂದು ಸಲ ತಂದು ಬಿಟ್ಟುಬಿಡು. ಸೋಮವಾರ ನೀನು ಆಫೀಸಿಗೆ ಹೋಗೋ ಟೈಮಿಗೆ ಎಲ್ಲಾ ಸರಿ ಮಾಡಿಡ್ತೀನಿ' ಎಂದ ಮೇಲೆ ಸ್ವಲ್ಪ ಧೈರ್ಯ ಬಂದಿತ್ತು. ಅದೇ ರೀತಿ ನನ್ನ ಅಪಾರ್ಟ್‌ಮೆಂಟ್‌ನಲ್ಲಿರುವ ಡಾಕ್ಟರ್ ನರಹರಿಯವರು 'ಅಯ್ಯೋ ಅದಕ್ಯಾಕೆ ಅಷ್ಟು ಯೋಚನೆ ಮಾಡ್ತೀರಾ ಸಾರ್? ಏನಾದ್ರೂ ಹೆಚ್ಚು ಕಡಿಮೆ ಆದರೆ ಪಕ್ಕದಾಗೆ ನಮ್ಮ ಆಸ್ಪತ್ರೆ ಇಲ್ಲವಾ? ದಿನಾ ಹತ್ತು ಜನ ಆಕ್ಸಿಡೆಂಟ್ ಮಾಡಿಕೊಂಡು ಬಂದು ಅಡ್ಮಿಟ್ ಆಗ್ತಾರೆ. ನೀವು ಬಂದರೆ ಇಲ್ಲಾ ಅಂತೀವಾ?' ಎಂದು ಅಭಯವನ್ನಿತ್ತರು.

ನಾಲ್ಕು ವರ್ಷದ ಕೆಳಗೆ ಲೈಸೆನ್ಸ್ ಪಡೆದುಕೊಂಡಿದ್ದೆನಾದರೂ ಕಾರನ್ನು ನಡೆಸಲು ನನಗೆ ಬರುತ್ತಿರಲಿಲ್ಲ. ಡ್ರೈವಿಂಗ್ ಶಾಪಿನವರು ಇಪ್ಪತ್ತು ಕ್ಲಾಸು ಕಲಿತರೆ ಸಾಕು, ಶೂ ಮೇಕರ್ ಹಾಗೆ ಕಾರನ್ನು ಓಡಿಸುವಂತೆ ಮಾಡುತ್ತೇವೆ ಎಂದು ಹೇಳಿದವರು ನಮ್ಮ ಮನೆಯ ವಿಳಾಸ ನೋಡುತ್ತಲೇ 'ಐವತ್ತಕ್ಕೆ ಕಡಿಮೆ ಕ್ಲಾಸಿನೊಳಗೆ ಕಲಿಸಿ ಕೊಡೋದಕ್ಕೆ ಆಗಲ್ಲ ಸಾರ್' ಎಂದು ಹೇಳಿ ದುಪ್ಪಟ್ಟು ಹಣವನ್ನು ಕಟ್ಟಿಸಿಕೊಂಡರು. ಆದರೆ ಐವತ್ತು ಕ್ಲಾಸು ಮುಗಿದರೂ 'ಇನ್ನೊಂದು ನಾಲ್ಕು ಕಾಸು ಕಲಿತುಬಿಡರಿ ಸಾರ್. ಬನ್ನೇರುಘಟ್ಟ ರಸ್ತೆದಾಗೆ ಮನೆ ಅಂತೀರಾ...' ಎಂದು ನನಗೆ ಹಸಿರು ನಿಶಾನೆಯನ್ನು ತೋರಿಸದೆ ಮುಂದೂಡುತ್ತಲೇ ಹೋದರು. ಕಡೆಗೆ ಸಿಟ್ಟಿಗೆದ್ದ ನಾನು 'ನನ್ನ ಹೊಸ ಕಾರಿನಲ್ಲೇ ಡ್ರೈವಿಂಗ್ ಕಲಿತೀನಿ ಹೋಗಯ್ಯ' ಎಂದು ಹೇಳಿ ಕಾರು ತೆಗೆದು ಕೊಳ್ಳುವ ನಿರ್ಧಾರ ತೆಗೆದುಕೊಂಡೆ. ಅಕ್ಕ ಊರಿನಿಂದ ಭೂತರಾಜರ ಫೋಟೋವನ್ನು ಕಳುಹಿಸಿಕೊಟ್ಟು ಕಾರಿನ ಹಿಂಭಾಗಕ್ಕೆ ಅಂಟಿಸಲು ಅಪ್ಪಣೆಯಿತ್ತಳು. ಸುದರ್ಶನ ಹೋಮವನ್ನೂ ಊರಲ್ಲಿ ಮಾಡಿಸುವುದಾಗಿ ತಿಳಿಸಿದ್ದಳು.

ಅಂತೂ ಕಾರು ಬಂತು. ನನ್ನ ಗೆಳೆಯನೇ ನನ್ನ ಜೋಡಿ ಶೋ ರೂಮಿಗೆ ಬಂದು, ಕಾರನ್ನು ಮಾರುತಿ ದೇವಸ್ಥಾನಕ್ಕೆ ಒಯ್ದು ನಿಂಬೆ ಹಣ್ಣುಗಳನ್ನು ಚಿಂದಿ ಉಡಾಯಿಸಿ, ಮನೆಯ ಗ್ಯಾರೇಜಿಗೆ ಸುರಕ್ಷಿತವಾಗಿ ತಂದಿಟ್ಟು ಹೋದ. ಹೋಗುವಾಗ ನನ್ನ ಕೈಯನ್ನು ಹಿಡಿದುಕೊಂಡು 'ನಾಳೆಯಿಂದ ಹುಷಾರು...' ಅಂತ ಕಣ್ಣನ್ನು ತೇವ ಮಾಡಿಕೊಂಡು ಹೇಳಿ ಹೋದ. ನನಗೆ ಗಂಟಲುಬ್ಬಿ ಬದಲಿಗೆ ಏನೂ ಹೇಳಲು ತೋಚದೆ ಬರೀ ಸಮ್ಮತಿಯಲ್ಲಿ ಗೋಣಲ್ಲಾಡಿಸಿದೆ. ಆ ರಾತ್ರಿ ಅತ್ಯಂತ ಭೀಕರವಾದ ಕನಸುಗಳು ಬಿದ್ದು ಬೆಚ್ಚಿ ಎದ್ದು ಕೂತೆ. ಆ ನೀರವ ರಾತ್ರಿಯಲ್ಲಿ, ನಾಳೆ ಬೆಳಿಗ್ಗೆ ಎದ್ದ ತಕ್ಷಣ ಕಾರನ್ನು ಓಡಿಸಿಕೊಂಡು ಆಫೀಸಿಗೆ ಹೋಗಬೇಕೆಂಬ ವಿಚಾರ ಮೈಯಲ್ಲಿ ನಡುಕವನ್ನು ಹುಟ್ಟಿಸಿತು. ರಸ್ತೆಯಲ್ಲಿ ಟ್ರಾಫಿಕ್ ಶುರುವಾಗುವುದರೊಳಗೇ ಮನೆ ಬಿಡಬೇಕು. ಅದಕ್ಕಾಗಿ ಬೇಗನೇ ಏಳಬೇಕೆಂಬ ವಿಚಾರದಲ್ಲಿ ಸರಿಯಾಗಿ ನಿದ್ದೆಯೂ ಬರಲಿಲ್ಲ. ಸಾಯಂಕಾಲ ಆಫೀಸಿನಿಂದ ತಡವಾಗಿ ಬರಬೇಕೆಂಬ ಆಲೋಚನೆಯೂ ಬಂತು. ಈ ಥಳಥಳಿಸುವ ಕಾರಿನಿಂದಾಗಿ ಆಫೀಸಿನಲ್ಲಿ ಹೆಚ್ಚು ಸಮಯ ಕಳೆಯಬೇಕಾಗುತ್ತದಲ್ಲಾ ಎಂದು ಬೇಸರವೂ ಆಯ್ತು.

ಬೆಳಗ್ಗೆ ಏಳುವರೆಗೆಲ್ಲಾ ಆಫೀಸಿಗೆ ಹೊರಟುಬಿಟ್ಟೆ. ನಮ್ಮ ರಸ್ತೆಯ ಮೇಲೆ ಹೋಗುವಾಗ ಒಂಟೆಯ ಮೇಲೆ ಕುಳಿತು ಪ್ರಯಾಣ ಮಾಡಿದಂತಹ ಅನುಭವವಾಯಿತು. ಆದರೂ ಹೆದರಲಿಲ್ಲ. ಸ್ಟೇರಿಂಗನ್ನು ಮುರಿದು ಹೋಗುವಷ್ಟು ಗಟ್ಟಿಯಾಗಿ ಹಿಡಿದುಕೊಂಡು, ಕಾರನ್ನು ತಿರುಗಿಸುವಾಗ ನಾನೂ ನನ್ನ ದೇಹವನ್ನು ಸ್ಟೇರಿಂಗ್ ಜೊತೆಗೆ ತಿರುಗಿಸುತ್ತಾ, ಸ್ಕೂಟರಿನ ಅನುಭವದಲ್ಲಿ ಬ್ರೇಕ್ ಹಾಕುವಾಗ ಕಾಲಿಗೆ ನೆಲ ಸಿಗುತ್ತಿಲ್ಲವೆಂದು ಕಂಗಾಲಾಗಿ, ಆಫೀಸಿಗೆ ಹೋಗಿ ಕಾರನ್ನು ಪಾರ್ಕಿಂಗ್ ಜಾಗದಲ್ಲಿ ಸೊಟ್ಟಂಬಟ್ಟ ಇಡುವುದರೊಳಗೆ ಮೈಯೆಲ್ಲಾ ಬೆವರಿತ್ತು. ಆದರೂ ಯಾವುದೇ ಅಪಘಾತವಿಲ್ಲದೇ ಯಶಸ್ವಿಯಾಗಿ ಕಾರನ್ನು ಆಫೀಸಿಗೆ ಒಯ್ದದ್ದರಿಂದ ವಿಜಯೋತ್ಸಾಹ ನಗುಮುಖದಲ್ಲಿ ಅರಳಿತ್ತು. ಆಫೀಸಿನಲ್ಲಿದ್ದವರಿಗೆಲ್ಲಾ ಸಿಹಿ ಹಂಚಿದೆ. ಎಲ್ಲರೂ ಕಾರಿಗೆ ಬಂದು ಪ್ರದಕ್ಷಿಣೆ ಹಾಕಿ 'ಬ್ರಿಲಿಯೆಂಟ್' ಎಂದರು. ಮತ್ತೆ ಮೂರ್ನಾಲ್ಕು ದಿನ ಅನಾಹುತವಿಲ್ಲದಂತೆ ಕಾರು ಓಡಿಸಿದೆ. ಧೈರ್ಯ ಹೆಚ್ಚಿತು.

ನಾಲ್ಕನೇ ದಿನ ಅಪಘಾತವಾಯ್ತು! ರಿಂಗ್‌ರೋಡ್ ಸರ್ಕಲ್ ಬಳಿ ಸಾವಿರಾರು ವಾಹನಗಳು ನಿಂತು ಬಿಟ್ಟಿದ್ದವು. ಯಾವುದೋ ಲಡಕಾಸಿ ಲಾರಿಯೊಂದು ಪೆಟ್ರೋಲ್ ಮುಗಿದು ಹೋಗಿದೆಯೆಂಬ ಕಾರಣದಿಂದ ಸರಿಯಾಗಿ ಸರ್ಕಲ್ ಮಧ್ಯದಲ್ಲಿ ನಿಂತು ಬಿಟ್ಟಿತ್ತು. ಡ್ರೈವರ್, ಕ್ಲೀನರ್ ಎಲ್ಲಾ ನಾಪತ್ತೆ. ಪಾಪ, ಟ್ರಾಫಿಕ್ ಇನ್ಸ್‌ಪೆಕ್ಟರ್ ಆದರೂ ಏನು ಮಾಡಿಯಾನು? ಅವನೂ ಕಂಬಿ ಕಿತ್ತಿದ್ದ. ಕುಂಭಮೇಳದಲ್ಲಿ ಕಳೆದು ಹೋದ

PAGE DONATED BY : **SHRI V. G. BHAT, NIGDI**

ಮಗುವಿನಂತೆ ಗಡಗಡನೇ ನಡುಗಿದೆ. ಮೊದಲೇ ಆಫೀಸಿಗೆ ಹೊತ್ತಾಗಿದ್ದರಿಂದ ವಾಹನಾಸುರರೆಲ್ಲಾ 'ಪೊಂವ್ ಪೊಂವ್' ಎಂದು ಏಕಪ್ರಕಾರವಾಗಿ ಸದ್ದು ಮಾಡಲಾರಂಭಿಸಿದರು. ನನಗೆ ಏನು ಮಾಡುವುದೋ ತೋಚದಂತಾಗಿ ಕಾರನ್ನು ಮುಂದಕ್ಕೆ ಓಡಿಸಿಬಿಟ್ಟೆ. ಮುಂದಿದ್ದ ಆಟೋಕ್ಕೆ ಗುದ್ದಿ ಬಿಟ್ಟಿತು. 'ಭಗವಂತ' ಎಂಬ ಉದ್ಗಾರ ನನ್ನ ಬಾಯಿಂದ ತಾನೇ ತಾನಾಗಿ ಬಂತು. ಆಟೋರಾಜ ಕೆಳಗಿಳಿದು ನನ್ನೆಡೆಗೆ ನೋಡಿದ. ನಾನು ಏನೂ ಮಾಡಲು ತೋಚದೆ ಬೋನಿನಲ್ಲಿ ಸಿಕ್ಕುಬಿದ್ದ ಇಲಿಯಂತೆ ನನ್ನ ಕಾರಿನಲ್ಲಿ ಕುಳಿತಿದ್ದೆ. ಆಟೋರಾಜ ಒಳ್ಳೆಯ ದಷ್ಟಪುಷ್ಟ ಬೆಕ್ಕಿನಂತೆ ನನ್ನ ಬಳಿಗೆ ಬಂದ.

'ಇಳಿಯಲೇ ಕೆಳಗೆ' ಎಂದು ಗದರಿಸಿದ. ಕೆಳಗಿಳಿದೆ. 'ನಂದೇನೂ ತಪ್ಪಿಲ್ಲ. ಹಿಂದಿನವರು ಅವಸರ ಮಾಡಿದರು' ಎಂದು ಬ್ಬೆಬ್ಬೆಬ್ಬೆ ಮಾಡಿದೆ. ನನ್ನ ಧ್ವನಿ ಕೇಳಿದ್ದೇ ಆಟೋರಾಜ ಮತ್ತಷ್ಟು ಗಡುಸಾದ. ಗಲಾಟೆ ಮಾಡಲಾರಂಭಿಸಿದ. ಅದೆಲ್ಲಿದ್ದರೋ ಗೊತ್ತಿಲ್ಲ. ನೂರಾರು ಜನರು ಗುಂಪು ಗೂಡಿಬಿಟ್ಟರು. ಆಟೋರಾಜನ ವಾಹನದ ಹಿಂಭಾಗಕ್ಕೆ ಅಂಗೈ ಅಗಲ ಪೊಚ್ಚು ಬಿದ್ದಿತ್ತು. ಎರಡು ಸಾವಿರಕ್ಕೆ ಕಡಿಮೆ ಕೊಟ್ಟರೆ ಪೊಲೀಸ್ ಸ್ಟೇಶನ್‌ಗೆ ಹೋಗೋಣ ಎಂದು ಶುರುವಿಟ್ಟ. 'ಪೊಲೀಸ್' ಶಬ್ದವೇ ವಿಚಿತ್ರ ಹೆದರಿಕೆ ಯನ್ನುಂಟು ಮಾಡಿ, ಎರಡು ಸಾವಿರವನ್ನು ತೆಪ್ಪಗೆ ಕೊಟ್ಟು ಬಿಟ್ಟೆ.

ಆಫೀಸಿನ ದಾರಿಯಲ್ಲಿ ಕಾರನ್ನು ನಿಲ್ಲಿಸಿ ಕೆಳಗಿಳಿದೆ. ನನ್ನ ಕಾರಿನ ಮುಂಭಾಗಕ್ಕೆ ಗಾಯವಾಗಿತ್ತು. ದುಃಖದ ಸೆಲೆಯೊಂದು ನನ್ನಲ್ಲಿ ಹರಿದಾಡಿತು. ಕಾರಿನ ಮುಂದೆ ಕುಳಿತು ಅದರ ಗಾಯವನ್ನು ಮೆತ್ತಗೆ ಸವರಿದೆ. ಆಟದಲ್ಲಿ ಬಿದ್ದು ಗಾಯ ಮಾಡಿಕೊಂಡು ಬಂದ ಮಗುವಿನ ದೇಹವನ್ನು ಸವರುವ ತಾಯಿಯಂತೆ! ಯಾರ ಮುಂದೆಯೂ ಬಾಯಿ ಬಿಡದೆ ಸುಮ್ಮನೆ ಆಫೀಸಿನಲ್ಲಿ ಜೀವಸತ್ತವನಂತೆ ಇದ್ದ ನನ್ನನ್ನು ಆತ್ಮೀಯ ಸಹೋದ್ಯೋಗಿಯೊಬ್ಬ ಗುರುತಿಸಿ 'ಏನಾಯ್ತೋ' ಎಂದು ಪ್ರೀತಿಯಿಂದ ವಿಚಾರಿಸಿದ. ಪಾರ್ಕಿಂಗ್‌ಗೆ ಕರೆದು ಕೊಂಡು ಹೋಗಿ ತೋರಿಸಿದೆ. 'ಹೇಗಾಯ್ತೋ?' ಎಂದ. 'ನಾನು ಸಿಗ್ನಲ್‌ನಲ್ಲಿ ಸುಮ್ಮನೆ ನಿಂತಿದ್ದೆ. ಆಟೋದವನು ಬಂದು ಹೊಡೆದುಬಿಟ್ಟ ಎಂದು ಅನಾಯಾಸವಾಗಿ ಸುಳ್ಳು ಹೇಳಿದೆ. 'ಪ್ಚ..ಪ್ಚ.. ಹೊಸ ಕಾರು!' ಎಂದು ಅನುಕಂಪ ತೋರಿಸಿದಾಗ ನನಗೆ ಆತ್ಮೀಯರೊಬ್ಬರು ನನ್ನನ್ನು ವಹಿಸಿಕೊಂಡರಲ್ಲಾ ಅಂತ ಸಮಾಧಾನವಾಯ್ತು.

'ಅವನ ಹತ್ತಿರ ಹಣ ಕಿತ್ತುಕೊಂಡೆಯೋ ಇಲ್ಲವೋ?' ಎಂದು ಕೇಳಿದ. 'ಪಾಪ, ಅವನು ಬಡವ. ಕೈಯಾಗಿನ ಉಂಗುರ ಕೊಡ್ತೀನಿ. ಈಗ ಕಾಸಿಲ್ಲ ಸಾರ್ ಅಂದ. ನಾನು ತೊಗಲ್ಲಿಲ್ಲ' ಎಂದೆ. ಆದರೆ ಏನೋ ಹೊಳೆದವನಂತೆ 'ಅಲ್ಲ ಕಣೋ, ಮುಂಭಾಗಕ್ಕೆ ಹೊಡೆತ ಬಿದ್ದಿದೆ. ಅದು ಹೆಂಗೆ ಆಟೋ ದವನು ಬಂದು ಗುದ್ದಿದ?' ಎಂಬ ಹೊಸ ಲಾ ಪಾಯಿಂಟ್ ಹಾಕಿದ. ಸುಳ್ಳು ಹೇಳುವಾಗ ಇಂತಹ ವಿಚಿತ್ರ ವಿಚಾರಣೆಯನ್ನು ನಿರೀಕ್ಷಿಸಿರಲಿಲ್ಲ. 'ರಿವರ್ಸ್‌ನಲ್ಲಿ ಬಂದು ಹೊಡೆದ'- ಮತ್ತೊಂದು ಸುಳ್ಳು ಹೇಳಿದೆ. 'ಆಟೋಕ್ಕೆ ರಿವರ್ಸ್ ಗೇರ್ ಇರ್ತದಾ?' ಹೊಸದೊಂದು ವಿಚಾರಣೆ. ನನಗೆ ಆ ವಿಷಯ ಗೊತ್ತಿರಲಿಲ್ಲ. 'ನನ್ನ ಕಾರಿಗೆ ಗಾಯ ಆಗಿದೆ ಅಂತ ನಾನು ಒದ್ದಾಡ್ತಾ ಇದೀನಿ. ನೀನು ನನ್ನ ಕಟಕಟೆಯಲ್ಲಿ ನಿಲ್ಲಿಸಿ ಪ್ರಶ್ನೆ ಕೇಳ್ತೀಯಲ್ಲಾ?' ಎಂದು ಧ್ವನಿಯನ್ನು ಸ್ವಲ್ಪ ಅಳುಬುರುಕ ಮಾಡಿದೆ. ಸಹೋದ್ಯೋಗಿ ಕರಗಿದ. 'ಏನೂ ಯೋಚನೆ ಮಾಡಬೇಡ, ಪುಟ್ಟ ಗಾಯ ಆಗಿದೆಯಷ್ಟೇ. ಒಳ್ಳೆ ದೃಷ್ಟಿಬೊಟ್ಟಿನ ಹಾಗೆ ಕಾಣ್ತದೆ' ಎಂದು ಸಮಾಧಾನ ಮಾಡಿದ. ಮತ್ತೆ ಆಫೀಸಿನೊಳಗೆ ಹೋಗುವಾಗ 'ಪ್ಲೀಸ್, ಯಾರಿಗೂ ಹೇಳಬೇಡ' ಎಂದು ಬೇಡಿಕೊಂಡೆ. ಸರಿಯೆಂದು ಒಪ್ಪಿಕೊಂಡ.

ಒಂದು ಗಂಟೆಯಲ್ಲಿ ಇಡೀ ಆಫೀಸಿಗೆ ನನ್ನ ಕಾರಿನ ಗಾಯದ ವಿಚಾರ ಗೊತ್ತಾಗಿತ್ತು. ನಾಲ್ಕು ದಿನದ ಹಿಂದೆ ನಾನು ಹಂಚಿದ ಸಿಹಿಯನ್ನು ಚಪ್ಪರಿಸಿ ತಿಂದ ಎಲ್ಲರೂ ಬಂದು 'ಹೇಗಾಯ್ತು? ಎಲ್ಲಾಯ್ತು?' ಎಂದು ಕಿರಿಕಿರಿ ಮಾಡಲಾರಂಭಿಸಿದರು. 'ಆಟೋರಾಜ, ರಿವರ್ಸ್ ಗೇರ್, ಬನ್ನೇರುಘಟ್ಟ ರಸ್ತೆ...' ಅಂತೆಲ್ಲಾ ಹೇಳಿ ಹೇಳಿ ಸುಸ್ತಾಗಿಬಿಟ್ಟೆ. ಎಲ್ಲರೂ ಪಾರ್ಕಿಂಗ್‌ಗೆ ಹೋಗಿ 'ಪ್ಚ.. ಪ್ಚ.. ಹೊಸ ಕಾರು' ಎಂದು ಬೇಜಾರು ವ್ಯಕ್ತಪಡಿಸಿ 'ದೃಷ್ಟಿ ಬೊಟ್ಟಿನ ತರಹ ಕಾಣುತ್ತೆ' ಅಂತ ಸಮಾಧಾನ ಮಾಡಿದರು. ಯಾರೋ ಒಬ್ಬರು 'ನೀವು ಇನ್ನೂ ನಾಲ್ಕು ದಿನ ಡ್ರೈವಿಂಗ್ ಕಲಿತು ಕಾರುಕೊಳ್ಳಬೇಕಿತ್ತು' ಅಂತ ಹೇಳಿದಾಗ ರೇಗಿ ಹೋಯ್ತು. 'ರಿವರ್ಸ್‌ನಲ್ಲಿ ಗಾಡಿ ಬಂದು ಹೊಡೆಯೋದಕ್ಕೆ ಅದೆಂಥಾ ಡ್ರೈವಿಂಗ್ ಕಲೀಲಿಕ್ಕೆ ಆಗ್ತದೆ ಕಣ್ರೀ...' ಎಂದು ಗುರ್ರೆಂದೆ. ಈ ವೇಳೆಗಾಗಲೇ ನಾನೂ ಆಟೋ ರಿವರ್ಸ್ ನಲ್ಲಿ ಬಂದು ಹೊಡೆದ್ದರಿಂದಲೇ ನನ್ನ ಕಾರಿಗೆ ಗಾಯವಾಗಿದ್ದು ಎಂದು ಪ್ರಾಮಾಣಿಕವಾಗಿ ನಂಬುವ ಸ್ಥಿತಿಗೆ ಬಂದಿದ್ದೆ. ಆತ್ಮೀಯ ಗೆಳೆಯ ಮಾತ್ರ 'ಯಾರಿಗೂ ಹೇಳದೆ ನನ್ನೊಳಗೇ ಇಟ್ಟುಕೊಳ್ಳಲಿಕ್ಕೆ ಸಾಧ್ಯವೇ ಆಗಲಿಲ್ಲ. ಕ್ಷಮಿಸು' ಅಂತ ಇ-ಮೇಲ್ ಕಳುಹಿಸಿದ.

ಆ ರಾತ್ರಿ ನಿದ್ದೆ ಇರಲಿಲ್ಲ. ಸ್ವಲ್ಪ ಜೊಂಪು ಹತ್ತಿದಂತಾಗಿ ಕಣ್ಣು ಮುಚ್ಚುವದರೊಳಗೆ ವಿಷ್ಣು ಚಕ್ರದಂತಹ ಆಯುಧವೊಂದು ನನ್ನ ಕಾರಿನ ಮೇಲೆ ಹರಿದಾಡಿ ಅದನ್ನು ತರಕಾರಿ ಕೊಯ್ಯುವಂತೆ ಕೊಯ್ದ ಕನಸು ಬಿದ್ದು ಎಚ್ಚರವಾಗಿ ಬಿಡುತ್ತಿತ್ತು. ಲಕ್ಷಗಟ್ಟಲೆ ಸುರಿದ ಕಾರನ್ನು ಸುಮ್ಮನೆ ಹಾಳು ಮಾಡಿಕೊಂಡೆನಲ್ಲಾ ಎಂದು ವಿಚಿತ್ರ ದುಃಖವಾಗಿತ್ತು. ರಾತ್ರಿ ಎಲ್ಲರೂ ಮಲಗಿರುವ ವೇಳೆಯಲ್ಲಿ ಸದ್ದಿಲ್ಲದೆ ಎದ್ದು ನನ್ನ ಅಪಾರ್ಟ್ ಮೆಂಟಿನ ಕಾರು ನಿಲ್ದಾಣಕ್ಕೆ ಬಂದೆ. ನನ್ನ ಕಾರಿನ ಗಾಯ ದೀಪದ ಬೆಳಕಿಗೆ ಫಳಫಳನೆ ಹೊಳೆಯುತ್ತಿತ್ತು. ದೃಷ್ಟಿಬೊಟ್ಟು ಗಲ್ಲಕ್ಕೆಲ್ಲಾ ಸವರಿದಷ್ಟು ದೊಡ್ಡ ದಿತ್ತು. ಕಾರಿನ ಮುಂದೆ ಕುಳಿತೆ. ಯಾಕೋ ನನ್ನ ಕಾರು ತುಂಬ ದುಃಖ ದಲ್ಲಿದೆಯೆಂದು ಭಾಸವಾಯ್ತು. 'ಸಾರಿ' ಎಂದು ಮೆತ್ತಗೆ ಉಸುರಿದೆ. ವಾಪಾಸು ನನ್ನ ಮನೆಗೆ ಹೋಗಬೇಕೆಂದು ಮೆಟ್ಟಿಲು ಹತ್ತುವಾಗ ಪಕ್ಕದ ಮನೆಯವರ ಕಾರು ಕಣ್ಣಿಗೆ ಬಿತ್ತು. ಹತ್ತಿರ ಹೋದೆ. ಸರಿಯಾಗಿ ಹೆಡ್ ಲೈಟಿನ ಬಳಿ ಇಷ್ಟಗಲ ಗಾಯವಾಗಿದ್ದು ಕಂಡಿತು. ವಿಚಿತ್ರ ಖುಷಿಯಾಗಿ ಬಿಟ್ಟಿತು. ಅದರ ಬಾಜೂ ನಿಲ್ಲಿಸಿದ್ದ ಮೇಲಿನ ಮನೆಯವರ ಕಾರನ್ನು ನೋಡಿದೆ. ಕುಂಡೆಗೆ ಕಾಲಿನಿಂದ ಒದ್ದಂತೆ ಹಿಂಭಾಗಕ್ಕೆ ಪೊಚ್ಚು ಬಿದ್ದಿತ್ತು. ಇನ್ನಷ್ಟು ಖುಷಿಯಾಯ್ತು. ಒಂದೊಂದಾಗಿ ಕಾರನ್ನು ಗಮನಿಸುತ್ತಾ ಬಂದೆ. ಎಲ್ಲಾ ಕಾರುಗಳಿಗೂ ಗಾಯವಾಗಿತ್ತು. ಈವರೆಗೆ ನನ್ನೊಳಗೆ ಹಬ್ಬಿದ್ದ ಅಪರಾಧಿ ಭಾವ ಇಲ್ಲದಂತಾಗಿ ವಿಚಿತ್ರ ಖುಷಿಯಿಂದ ಶಿಳ್ಳೆ ಹಾಕಿದೆ.

ಆದರೆ ಪೆಂಟ್‌ಹೌಸ್‌ನಲ್ಲಿರುವ ವ್ಯಕ್ತಿಯ ಹೊಸ ಸ್ಕೋಡಾ ಕಾರಿಗೆ ಮಾತ್ರ ಏನೂ ಆಗಿರಲಿಲ್ಲ. ಹೊಟ್ಟೆಯಲ್ಲಿ ಸಂಕಟವಾಯಿತು. ಅದು ಹೇಗೆ ಸಾಧ್ಯ ಎನ್ನುವ ಛಲದಿಂದ ಇಡೀ ಕಾರನ್ನು ಪರೀಕ್ಷಿಸಿದೆ. ಊಹೂಂ! ಒಂದೂ ಗಾಯವಿರಲಿಲ್ಲ. 'ಬೋಳಿಮಗ, ಡ್ರೈವರ್‍ನ ಇಟ್ಟುಕೊಂಡಿದ್ದಾನೆ ಅಂತ ಕಾಣುತ್ತೆ' ಎಂದು ಅಸಮಾಧಾನದಿಂದ ಕುದಿಯಲಾರಂಭಿಸಿದೆ. ಕೈಯಲ್ಲಿದ್ದ ರೂಮಿನ ಕೀಲಿಯಿಂದ ನಾನೇ ಗೀರಿ ಬಿಡಲೇ ಎಂಬ ದುಷ್ಟ ಆಲೋಚನೆಯೂ ಸುಳಿದುಹೋಯ್ತು. ಆದರೆ ಧೈರ್ಯ ಬರಲಿಲ್ಲ. 'ಭಗವಂತ, ಅವನನ್ನು ಗುಂಪಿನಿಂದ ದೂರವಿಡಬೇಡ ತಂದೆ' ಎಂದು ಪ್ರಾರ್ಥಿಸಿ ಮನೆಗೆ ಹೋದೆ.

ಭಗವಂತ ನನ್ನ ಮೊರೆಯನ್ನು ಆಲಿಸಿದ. ಎರಡು ದಿನದ ನಂತರ ಸಿಕ್ಕ ಪೆಂಟ್ ಹೌಸಿನವನು 'ಫೋರ್ತ್ ಬ್ಲಾಕಿನಲ್ಲಿ ಪಾರ್ಕ್ ಮಾಡಿದ್ದಾಗ, ಕಳ್ಳ ನನ್ನ ಮಗ ಯಾವನೋ ಕಾರಿಗೆ ಗೀಚು ಹಾಕಿದ್ದಾನೆ ನೋಡ್ರಿ' ಎಂದು ಸಿಟ್ಟಿನಿಂದ ಸಂಕಟವನ್ನು ಹೊರಹಾಕಿದ. ನಾನು ಕಾರನ್ನು ಪರೀಕ್ಷಿಸಿದೆ. ಇಷ್ಟುದ್ದ ಗೀರು ಬಿದ್ದಿತ್ತು. ಖುಷಿಯಿಂದ ಹೃದಯ ಹಿಗ್ಗಿ ಹೀರೇ ಕಾಯಿಯಾಯ್ತು. 'ಪ್ಚ..ಪ್ಚ.. ಹೊಸ ಕಾರು' ಎಂದು ಅನುಕಂಪವನ್ನು ತೋರಿಸಿ 'ಇರಲಿ ಬಿಡಿ, ದೃಷ್ಟಿ ಬೊಟ್ಟಿನಂಗೆ ಕಾಣ್ತದೆ' ಎಂದು ಸಮಾಧಾನ ಮಾಡಿದೆ. ಭಕ್ತರ ಮೊರೆಯನ್ನು ಕೇಳುವ ಭಗವಂತನ ಮೇಲೆ ಪ್ರೀತಿಯುಕ್ಕಿ ಬಂತು.

*ಆಧಾರ : ನಮ್ಮಮ್ಮ ಅಂದ್ರೆ ನಂಗಿಷ್ಟ*

*PAGE DONATED BY :* ***SMT. GANGA P. BHAGWAT PRABHADEVI IN MEMORY OF LATE SHRI P. R. BHAGWAT (DEC. 2012)***

# ಸಂಕ್ಷಿಪ್ತ ಸುದ್ದಿಗಳು

**ಕರ್ನಾಟಕ ಸಂಘ ಮುಂಬಯಿ ವರದರಾಜ ಆದ್ಯ ಸ್ಮಾರಕ ಪ್ರಶಸ್ತಿ ಪ್ರದಾನ**
**'ಇನ್ನೊಂದು ಸಂಸ್ಕೃತಿ ಜತೆ ಬೆರೆತುಕೊಳ್ಳುವ ಗುಣ ಕನ್ನಡಿಗರಲ್ಲಿದೆ' : ಕಪ್ಪತ್ತನವರ್**

ಅನುವಾದ ಕಾಯಕ ಬೇರೆ ಬೇರೆ ಭಾಷೆಗಳ ನಡುವಿನ ಬಾಂಧವ್ಯ ಬೆಸೆಯುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಇಂತಹ ಬಾಂಧವ್ಯ ಬೆಸೆಯುತ್ತಿರುವ ಸಾಹಿತಿಗಳನ್ನು ಗುರುತಿಸಿ ಅವರಿಗೆ ಪ್ರಶಸ್ತಿ ನೀಡುತ್ತಿರುವ ಕರ್ನಾಟಕ ಸಂಘ ಮುಂಬಯಿ ಪ್ರಶಂಸನೀಯ ಕಾರ್ಯಗಳನ್ನು ಮಾಡುತ್ತಿದೆ ಎಂದು ಆದಾಯ ತೆರಿಗೆ ಇಲಾಖೆ ಮುಂಬಯಿ ಇದರ ಜಂಟಿ ಆಯುಕ್ತ ಸಿದ್ದರಾಮಪ್ಪ ಕಪ್ಪತ್ತನವರ್ ನುಡಿದರು.

ಸುವರ್ಣ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಕರ್ನಾಟಕ ಸಂಘ ಮುಂಬಯಿ ಇದರ 2015ನೇ ಸಾಲಿನ ವರದರಾಜ ಆದ್ಯ ಸ್ಮಾರಕ ಪ್ರಶಸ್ತಿ ಪ್ರದಾನ ಸಮಾರಂಭವು ಫೆ. 25ರಂದು ಸಂಜೆ ಡಾ. ವಿಶ್ವೇಶ್ವರಯ್ಯ ಸಭಾಗೃಹದಲ್ಲಿ ಜರಗಿದ್ದು, ಈ ಸಂದರ್ಭ ಗೌರವ ಅತಿಥಿಯಾಗಿದ್ದು ಮಾತನಾಡಿದ ಅವರು ಕನ್ನಡಿಗರು ಇತರ ಭಾಷೆಗಳ ಜತೆಗೆ ಬಾಂಧವ್ಯ ಬೆಸೆಯುವಲ್ಲಿ ಸದಾ ಮುಂದಿದ್ದಾರೆ. ಇನ್ನೊಂದು ಸಂಸ್ಕೃತಿಯ ಜತೆ ಬೆರೆತುಕೊಳ್ಳುವ ಹೃದಯ ವೈಶಾಲ್ಯ ಕನ್ನಡಿಗರಲ್ಲಿದೆ. ಇಲ್ಲಿ ಅನುವಾದ ಕಾರ್ಯವೂ ಅಷ್ಟೇ ಮಹತ್ವದ್ದು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡ ಸಾಹಿತಿ ಡಾ. ವಿಶ್ವನಾಥ ಕಾರ್ನಾಡ್ ಮಾತನಾಡಿ, ಸಂಘದ ಈ ಪ್ರತಿಷ್ಠಿತ ಪ್ರಶಸ್ತಿ ಇಂದು ಅರವಿಂದ ಹೆಬ್ಬಾರ್‌ರಿಗೆ ದೊರೆತಿರುವುದು ಸಂತೋಷ ತಂದಿದೆ. ಇದರ ಹಿಂದೆ ಉತ್ತಮ ಉದ್ದೇಶವಿದೆ. ಇಲ್ಲಿಯ ನೆಲದಲ್ಲಿ ನಮ್ಮ ಸಂಬಂಧವನ್ನು ನಾವು ಗಟ್ಟಿಗೊಳಿಸಬೇಕು. ಸಮಾರಂಭದ ಅಧ್ಯಕ್ಷತೆ ವಹಿಸಿದ ಸಂಘದ ಉಪಾಧ್ಯಕ್ಷ ಬಿ. ಜಿ. ನಾಯಕ್ ಅವರು ಮಾತನಾಡಿ, ಕಳೆದ 83 ವರ್ಷಗಳಿಂದ ಕರ್ನಾಟಕ ಸಂಘ ಮುಂಬಯಿ ಕನ್ನಡಿಗರೊಂದಿಗೆ ಸ್ಥಳೀಯ ಮರಾಠಿಗರ ಜತೆಗೂ ಉತ್ತಮ ಸಂಬಂಧ ಇರಿಸಿ ಸೌಹಾರ್ದ ವಾತಾವರಣ ಬೆಳೆಸುವಲ್ಲಿ ನಿರಂತರ ಶ್ರಮಿಸುತ್ತಿದೆ.

ವರ್ಷವಿಡೀ ಸಾಹಿತ್ಯ-ಸಾಂಸ್ಕೃತಿಕ ಅರ್ಥಪೂರ್ಣ ಯಶಸ್ವಿ ಕಾರ್ಯಕ್ರಮಗಳನ್ನು ನಡೆಸುತ್ತಿದೆ. ತನ್ನ 65 ವರ್ಷ ಪ್ರಾಯದ ಬಳಿಕ ಕರ್ನಾಟಕ ಸಂಘ ಮುಂಬಯಿ ಮರಾಠಿ ಕ್ಲಾಸ್‌ನಲ್ಲಿ ಮರಾಠಿ ಕಲಿತು ಇಂದು ಮರಾಠಿಯಲ್ಲಿ ಕನ್ನಡದ ಉತ್ತಮ ಕೃತಿಗಳನ್ನು ಅನುವಾದಿಸುತ್ತಿರುವ ಅರವಿಂದ ಹೆಬ್ಬಾರರಿಗೆ ಈ ಪ್ರಶಸ್ತಿ ಸಂದಿರುವುದು ನಮಗೆಲ್ಲ ಅಭಿಮಾನದ ಸಂಗತಿ ಎಂದರು.

ಗಣ್ಯರು ಸಾಹಿತಿ-ಅನುವಾದಕ ಅರವಿಂದ ಹೆಬ್ಬಾರ್ ಅವರಿಗೆ 2015ನೇ ಸಾಲಿನ ವರದರಾಜ ಆದ್ಯ ಸ್ಮಾರಕ ಪ್ರಶಸ್ತಿಯನ್ನು ಪ್ರದಾನಿಸಿದರು. ಪ್ರಶಸ್ತಿಯು ಹನ್ನೊಂದು ಸಾವಿರ ರೂ. ನಗದು, ಪ್ರಶಸ್ತಿ ಫಲಕ, ಶಾಲು, ಫಲಪುಷ್ಪವನ್ನು ಒಳಗೊಂಡಿತ್ತು. ಸಭಾ ಕಾರ್ಯಕ್ರಮವನ್ನು ಗೌರವ ಕಾರ್ಯದರ್ಶಿ, ಕತೆಗಾರ ಓಂದಾಸ್ ಕಣ್ಣಂಗಾರ್ ನಿರೂಪಿಸಿದರು. ಗಣ್ಯರನ್ನು ಸಂಘದ ಮಾಜಿ ಅಧ್ಯಕ್ಷ ಮನೋಹರ ಎಂ. ಕೋರಿ, ಉಪಾಧ್ಯಕ್ಷ ಬಿ. ಜಿ. ನಾಯಕ, ಗೌರವ ಕೋಶಾಧಿಕಾರಿ ಎಂ. ಡಿ. ರಾವ್ ಮೊದಲಾದವರು ಗೌರವಿಸಿದರು.

ಪ್ರಶಸ್ತಿ ವಿಜೇತರನ್ನು ರಂಗತಜ್ಞ ಡಾ. ಭರತ್ ಕುಮಾರ್ ಪೊಲಿಪು ಮತ್ತು ಅತಿಥಿಗಳನ್ನು ಸ್ನೇಹ ಸಂಬಂಧ ಸಂಪಾದಕ ಶ್ರೀನಿವಾಸ್ ಜೋಕಟ್ಟೆ ಪರಿಚಯಿಸಿದರು. ಗೌರವ ಕೋಶಾಧಿಕಾರಿ ಎಂ. ಡಿ. ರಾವ್ ವಂದಿಸಿದರು. ಅನಂತರ ಶ್ರೀ ಅಯ್ಯಪ್ಪ ಯಕ್ಷಕಲಾ ಪ್ರತಿಷ್ಠಾನ ಮುಂಬಯಿ ವತಿಯಿಂದ 'ಓಂ ನಮಃ ಶಿವಾಯ' ಯಕ್ಷಗಾನ ಪ್ರದರ್ಶನಗೊಂಡಿತು.

**ಶ್ರೀಮತಿ ಶಾರದಾ ಅಂಚನ್‌ರವರಿಗೆ**
**"ಮಾತೋಶ್ರೀ ರತ್ನಮ್ಮ ಹೆಗ್ಗಡೆ ಮಹಿಳಾ ಗ್ರಂಥ ಪುಶಸ್ತಿ"**



ಕರ್ನಾಟಕ ವಿದ್ಯಾವರ್ಧಕ ಸಂಘವು 2014 ನೇ ಸಾಲಿನ "ಮಾತೋಶ್ರೀ ರತ್ನಮ್ಮ ಹೆಗ್ಗಡೆ ಮಹಿಳಾ ಗ್ರಂಥ ಬಹುಮಾನ"ಕ್ಕಾಗಿ ನಾಲ್ಕು ಕನ್ನಡ ಶ್ರೇಷ್ಠ ಕೃತಿಗಳನ್ನು ಆಯ್ಕೆ ಮಾಡಲಾಗಿದ್ದು, ಅವುಗಳಲ್ಲಿ ಶ್ರೀಮತಿ ಶಾರದಾ ಅಂಚನ್‌ರವರ "ನಡೆ ನೀ ಮುಂದೆ" ಕವನ ಸಂಕಲನವೂ ಆಯ್ಕೆಯಾಗಿದೆ. ಶ್ರೀಮತಿ ಶಾರದಾ ಅಂಚನ್‌ರವರಿಗೆ ಅಭಿನಂದನೆಗಳು.

**ಶಿಮುಂಜೆ ಪರಾರಿ ಅವರ ಅಭಿನಂದನ ಸಮಾರಂಭ**
**ಮತ್ತು ಸಾಹಿತ್ಯ ಸಂಭ್ರಮ**

ದೂರದ ಮುಂಬಯಿಯಲ್ಲಿ ಜನಿಸಿ ಕನ್ನಡ ತುಳು ಸಾಹಿತ್ಯ ಸಂಸ್ಕೃತಿಗಾಗಿ ಶ್ರಮಿಸಿದ ಹಿರಿಯ ಸಾಹಿತಿ, ನಟ, ಸಂಘಟಕ ಶಿಮುಂಜೆ ಪರಾರಿ ಅವರ ಅಭಿನಂದನ ಕಾರ್ಯಕ್ರಮ ಎಪ್ರಿಲ್ 16ರಂದು ಮಧ್ಯಾಹ್ನ 2ರಿಂದ ಮುಂಬಯಿ ವಿಶ್ವವಿದ್ಯಾಲಯದ ಕವಿವರ್ಯ ಕುಸುಮಾಗ್ರಜ ಭಾಷಾ ಭವನದ ಸಭಾಂಗಣದಲ್ಲಿ ನಡೆಯಲಿದೆ.

ಈ ಕಾರ್ಯಕ್ರಮವು ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯ ಮತ್ತು ಶಿಮುಂಜೆ ಪರಾರಿ ಅಭಿನಂದನ ಸಮಿತಿ ಮುಂಬಯಿ ಇವರ ಸಂಯುಕ್ತ ಆಶ್ರಯದಲ್ಲಿ ನಡೆಯಲಿದೆ. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಖ್ಯಾತ ಉದ್ಯಮಿ ಮುದ್ರಾಡಿ ದಿವಾಕರ ಶೆಟ್ಟಿ ಅವರು ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕರ್ನಾಟಕ ಮಲ್ಲದ ಸಂಪಾದಕರಾದ ಚಂದ್ರಶೇಖರ ಪಾಲೆತ್ತಾಡಿ, ನ್ಯಾಯವಾದಿ ಪ್ರಕಾಶ್ ಎಲ್. ಶೆಟ್ಟಿ, ಬಂಟರ ಸಂಘ ಅಂಧೇರಿ-ಬಾಂದ್ರಾ ಪ್ರಾದೇಶಿಕ ಸಮಿತಿಯ ಕಾರ್ಯಾಧ್ಯಕ್ಷರಾದ ಗುಣಪಾಲ ಶೆಟ್ಟಿ, ಐಕಳ, ಹೋಟೇಲ್ ಅವೆನ್ಯೂನ ಮಾಲಕರಾದ ರಘುರಾಮ ಶೆಟ್ಟಿ, ಕ್ವಾಲಿಟಿ ಕ್ಯಾಟರರ್ಸ್‌ನ ಮಾಲಕರಾದ ಭುಜಂಗ ಶೆಟ್ಟಿಯವರು ಭಾಗವಹಿಸಲಿದ್ದಾರೆ. ಅಭಿನಂದನ ಭಾಷಣವನ್ನು ಖ್ಯಾತ ಕವಿ, ಸಾಹಿತಿ ಜೀವಿ ಕುಲಕರ್ಣಿ ಅವರು ಮಾಡಲಿದ್ದಾರೆ. ಪ್ರಾಸ್ತಾವಿಕ ನುಡಿಯನ್ನು ಮುಂಬಯಿಯ ಖ್ಯಾತ ಕವಿ ಬಿ. ಎಸ್. ಕುರ್ಕಾಲ್ ಅವರು ಮಾಡಲಿದ್ದಾರೆ.

ಇದೇ ಸಂದರ್ಭದಲ್ಲಿ ಶಿಮುಂಜೆ ಪರಾರಿ ಅವರ ಸಾಹಿತ್ಯ ಸಂಭ್ರಮ ಕಾರ್ಯಕ್ರಮ ನಡೆಯಲಿದ್ದು ಅವರು ರಚಿಸಿದ ಸಾಹಿತ್ಯದ ಕುರಿತಾದ ವಿಚಾರ ಸಂಕಿರಣ ಕಾರ್ಯಕ್ರಮ ನಡೆಯಲಿದೆ. ಈ ಕಾರ್ಯಕ್ರಮದಲ್ಲಿ ಡಾ. ಜಿ. ಎನ್. ಉಪಾಧ್ಯ, ಡಾ. ಪೂರ್ಣಿಮಾ ಎಸ್. ಶೆಟ್ಟಿ, ಪೇತ್ರಿ ವಿಶ್ವನಾಥ ಶೆಟ್ಟಿ, ಡಾ. ಕರುಣಾಕರ ಶೆಟ್ಟಿ ಅವರು ಉಪನ್ಯಾಸವನ್ನು ನೀಡಲಿದ್ದಾರೆ. ಮಧ್ಯೆ ಕಾವ್ಯ ಗಾಯನ ಕಾರ್ಯಕ್ರಮದಲ್ಲಿ ವಿದುಷಿ ವೀಣಾ ಶಾಸ್ತ್ರಿ, ಸುಶೀಲಾ

*Page Donated by : **Shri Suhas Gunishastri**, Prabhadevi In the memory of his parents **Late Smt. Rajeshwari & Late Shri P. V. Gunishastri** , Past President, H.W.T.*

**RNI NO. MAHBIL / 2000 / 746,**
**Postal R.NO. MCN/161/2015-2017**
**WPP License No. MR / Tech / WPP-130 / North / 2016**
**'Licence to post without prepayment'**

**Posted at Mumbai Patrika Channel Stg. Office Mumbai - 400 001**
**Date of Publication : 1st of every month**
**REGISTERED NEWSPAPER**
**Date of Posting :**
**2nd, 3rd of every month**

*If undelivered, please return to :*
**HAVYAKA WELFARE TRUST**
B-207, Valmiki Apts., Near Pharmacy College,
Sundar Nagar, Kalina, Vidyanagari P. O.,
Mumbai - 400 098. ✆ 2665 2591
**E-mail : havyakamumbai@hotmail.com**
**Visit : www.havyakamumbai.com**

**To,**

Published by Narayan Akadas R.
for Havyaka Welfare Trust, Mumbai - 400 098.
being printed at M/s. Navin Printers, Mumbai - 400 016.
Hon. Editor : **Smt. Amita S. Bhagwat**

ದೇವಾಡಿಗ, ಲಕ್ಷ್ಮೀ ಶೆಟ್ಟಿ ಮೊದಲಾದವರು ಭಾಗವಹಿಸಲಿದ್ದಾರೆ. ಪೇಟೆಮನೆ ಪ್ರಕಾಶ್ ಶೆಟ್ಟಿಯವರು ಕಾರ್ಯಕ್ರಮ ನಿರೂಪಿಸಲಿದ್ದಾರೆ ಎಂದು ಪ್ರಕಟಣೆಯ ಮೂಲಕ ತಿಳಿಸಲಾಗಿದೆ. ಸರ್ವರಿಗೂ ಆದರದ ಸ್ವಾಗತವಿದೆ.

## ಕರ್ನಾಟಕ ಸಂಘ ಮುಂಬಯಿ ನೂತನ ಸಾಂಸ್ಕೃತಿಕ ಸಮುಚ್ಚಯ ಕರ್ನಾಟಕ ಸಂಘದ ನಿಯೋಗದಿಂದ ಕರ್ನಾಟಕ ಸರಕಾರ ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯರವರ ಭೇಟಿ



ಚಿತ್ರ : ಪಾರುಪತ್ಯಗಾರ ಡಾ. ಭರತ್ ಕುಮಾರ್ ಪೊಲಿಪು, ಗೌ. ಕಾರ್ಯದರ್ಶಿ ಓಂದಾಸ್ ಕಣ್ಣಂಗಾರ್ ಮನೋಹರ ಎಮ್. ಕೋರಿ, ಪ್ರಖ್ಯಾತ ಸಾಹಿತಿಗಳಾದ ಡಾ. ಕೆ. ಮರುಳ ಸಿದ್ದಪ್ಪ, ಪ್ರೋ. ಎಸ್. ಜಿ. ಸಿದ್ಧರಾಮಯ್ಯ, ಪತ್ರಕರ್ತ ದಿನೇಶ್ ಅಮೀನ್ ಮಟ್ಟು

ಮುಂಬಯಿ ಕನ್ನಡಿಗರ ಪ್ರತಿಷ್ಠಿತ ಪ್ರಾತಿನಿಧಿಕ ಸಂಸ್ಥೆಯಾದ ಕರ್ನಾಟಕ ಸಂಘ ಮುಂಬಯಿ ಇದರ ನೂತನ ಸಾಂಸ್ಕೃತಿಕ ಸಮುಚ್ಛಯಕ್ಕೆ ಕರ್ನಾಟಕ ಸರಕಾರದಿಂದ ಸಹಾಯ ಧನಕ್ಕಾಗಿ ದಿನಾಂಕ 22-02-2016 ರಂದು ಕರ್ನಾಟಕದ ಮುಖ್ಯಮಂತ್ರಿಯವರಾದ ಸನ್ಮಾನ್ಯ ಶ್ರೀ ಸಿದ್ಧರಾಮಯ್ಯನವರಿಗೆ ಮನವಿ ಸಲ್ಲಿಸಲಾಯಿತು. ಮುಖ್ಯ ಮಂತ್ರಿಯವರ ಕಾವೇರಿ ನಿವಾಸದಲ್ಲಿ ಸಂಘದ ಮಾಜಿ ಅಧ್ಯಕ್ಷರೂ, ಹಾಲಿ ಪಾರುಪತ್ಯಗಾರರೂ ಆದ ಶ್ರೀ ಮನೋಹರ ಎಂ. ಕೋರಿ; ಪಾರುಪತ್ಯಗಾರರಾದ ಡಾ। ಭರತ್ ಕುಮಾರ್ ಪೊಲಿಪು ಗೌ. ಕಾರ್ಯದರ್ಶಿ ಓಂದಾಸ ಕಣ್ಣಂಗಾರ್ ಕನ್ನಡದ ಪ್ರಖ್ಯಾತ ಸಾಹಿತಿಗಳೂ, ಚಿಂತಕರೂ ಆದ ಡಾ। ಕೆ. ಮರುಳ ಸಿದ್ದಪ್ಪ, ಪ್ರೊ। ಎಸ್. ಜಿ. ಸಿದ್ಧರಾಮಯ್ಯರವರನ್ನು ಒಳಗೊಂಡ ನಿಯೋಗವು ಸಂಘದ ಈ ನಿರ್ಮಿತಿಯ ಕುರಿತು ಹಾಗೂ ಚಟುವಟಿಕೆಗಳ ಕುರಿತಾದ ವಿಸ್ತಾರ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಮುಖ್ಯ ಮಂತ್ರಿಗಳ ಮಾಧ್ಯಮ ಸಲಹೆಗಾರರಾದ ಚಿಂತಕ, ಪತ್ರಕರ್ತ, ದಿನೇಶ್ ಅಮೀನ್ ಮಟ್ಟು ಉಪಸ್ಥಿತರಿದ್ದರು.

## DONATION



Received donation of Rs. 5,000/- from Smt. Lalita & Shri Suresh T. Bhagwat on the happy occasion of marriage of their daughter Chi. Sow. Ketki with Chi. Tushar, son of Smt. Madhavi and Shri Mahendra T. Kopkar. We wish them happy & prosperous married life.



**Dombivli Havyaka Sangha Mahila Vibhaga Varshika Picnic**

*PAGE DONATED BY :* ***SMT. TRIVENI BHATSHIKAR & SHRI R. T. BHATSHIKAR,*** *GHATKOPAR IN THE MEMORY OF* ***LATE SHRI T. R. BHATSHIKAR***